بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 42

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

17 ಅಕ್ಟೋಬರ್ 2024, 17 ಅಖಾ 1403 ಹಿಜರಿ ಶಮ್‌ಸಿ,
13 ರಬೀಉಸ್ಸಾನಿ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅವರಿಗೆ ದೀರ್ಘ ಮತ್ತು ಸಕ್ರಿಯ ಜೀವನವನ್ನು ನೀಡಲಿ ಮತ್ತು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَیِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِہٖ وَاَمْرِہٖ

## ಅಲ್ಲಾಹನ ಉಪದೇಶ

لَا تَمُدَّنَّ عَيْنَيْكَ اِلٰى مَا مَتَّعْنَا بِهٖۤ
اَزْوَاجًا مِّنْهُمْ وَلَا تَحْزَنْ عَلَيْهِمْ
وَاخْفِضْ جَنَاحَكَ لِلْمُؤْمِنِيْنَ ○

**(ಅಲ್-ಹಿಜರ್: 89)**

**ಅಂದರೆ: ಅವರ ಪೈಕಿ ಕೆಲವರಿಗೆ ನಾವು ನೀಡಿರುವ ತಾತ್ಕಾಲಿಕ ಸುಖಾಡಂಬರಗಳ ಕಡೆಗೆ ನೀನು ದಿಟ್ಟಿಸಿ ನೋಡಬೇಡ. ನೀನು ಅವರ ಬಗ್ಗೆ ವ್ಯಥೆಗೊಳ್ಳುವುದೂ ಬೇಡ.ಸತ್ಯವಿಶ್ವಾಸಿಗಳಿಗೆ ನಿನ್ನ (ಕರುಣೆಯ) ರೆಕ್ಕೆಯನ್ನು ಬಿಡಿಸಿಕೊಡು.**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### <u>ಸತ್ಯವಿಶ್ವಾಸಿಯು (ಮುಮಿನ್) ಇನ್ನೊಬ್ಬ ನಂಬಿಕೆಯುಳ್ಳವನಿಗೆ (ಮುಮಿನ್‌ಗೆ) ಕಟ್ಟಡದಂತೆ ಅದರ ಒಂದು ಭಾಗವು ಇನ್ನೊಂದು ಭಾಗವನ್ನು ಬಲಪಡಿಸುತ್ತದೆ</u>

**(2445)** ಹಝ್‌ರತ್ ಬಾರಾ ಬಿನ್ ಅಝಿಬ್(ರ) ವರದಿ ಮಾಡುತ್ತಾರೆ ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರು ಏಳು ವಿಷಯಗಳನ್ನು ಮಾಡಲು ಆದೇಶಿಸಿದ್ದಾರೆ ಮತ್ತು ಏಳು ವಿಷಯಗಳನ್ನು ನಿಷೇಧಿಸಿದ್ದಾರೆ. ನಂತರ ಅವರು (ತಮಗೆ ಆಜ್ಞಾಪಿಸಲಾದ ಕೆಲಸಗಳು, ಅವುಗಳೆಂದರೆ) ರೋಗಿಗಳಿಗೆ ಉಪಚರಿಸಬೇಕು, ಮತ್ತು ಅಂತ್ಯಕ್ರಿಯೆಯಲ್ಲಿ ಜೊತೆಗೂಡಬೇಕು, ಸೀನುವಿಕೆಗೆ ಉತ್ತರಿಸುವುದು, ಸಲಾಂ ಹೇಳುವವರಿಗೆ ಉತ್ತರಿಸಬೇಕು, ದಮನಿತರಿಗೆ ಸಹಾಯ ಮಾಡಬೇಕು, ಆಹ್ವಾನಿತರ ಆಹ್ವಾನವನ್ನು ಸ್ವೀಕರಿಸುವುದು ಮತ್ತು ಪ್ರಮಾಣ ವಚನವನ್ನು ಪೂರೈಸುವುದು.

**(2446)** ಹಝ್‌ರತ್ ಅಬು ಮೂಸಾ(ರ) ವರದಿ ಮಾಡುತ್ತರೆ ರಸೂಲುಲ್ಲಾಹ್(ಸ) ರವರು ಹೇಳಿದರು: ನಂಬಿಕೆಯುಳ್ಳವನು (ಮುಮಿನ್) ಇನ್ನೊಬ್ಬ ನಂಬಿಕೆಯುಳ್ಳವನಿಗೆ (ಮುಮಿನ್‌ಗೆ) ಕಟ್ಟಡದಂತೆ ಅದರ ಒಂದು ಭಾಗವು ಇನ್ನೊಂದು ಭಾಗವನ್ನು ಬಲಪಡಿಸುತ್ತದೆ, ಮತ್ತು (ಇದನ್ನು ಹೇಳುವ ಮೂಲಕ ಸ್ಪಷ್ಟೀಕರಣಕ್ಕಾಗಿ) ಅವರು ಕೈಯ ಬೆರಳುಗಳನ್ನು ಇನ್ನೊಂದು ಕೈಯ ಬೆರಳುಗಳಿಗೆ ಹಾಕಿ ಹೇಳಿದರು.

**(ಸಹೀಹ್ ಬುಖಾರಿ, ಸಂಪುಟ-4, ಕಿತಾಬ್ ಅಲ್-ಮುಝಲಾಮ್, 2008 ಖಾದಿಯಾನ್ ಪ್ರಕಟಿತ)**

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್: https://akhbarbadr.in/Kannada/#gsc.tab=0**

'ಈಮಾನ್' (ವಿಶ್ವಾಸವು) ವ್ಯಕ್ತಿಗೆ ನಿಜವಾದ ಧೈರ್ಯ ಮತ್ತು ಶೌರ್ಯವನ್ನು ನೀಡುವ ಶಕ್ತಿಯಾಗಿದೆ. ಇದರ ಉದಾಹರಣೆಯನ್ನು ನಾವು ಸಹಾಬಗಳ ಜೀವನದಲ್ಲಿ ಕಾಣಬಹುದು.

## ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ದೇವರ ಮಾರ್ಗದಲ್ಲಿ ಕಷ್ಟಗಳನ್ನು ಸಹಿಸಿಕೊಳ್ಳುವುದು ಮತ್ತು ಕಷ್ಟಗಳನ್ನು ಎದುರಿಸಲು ಸಿದ್ಧರಾಗುವುದು ಈಮಾನ್‌ನಿಂದ ಮಾತ್ರ ಸಾಧ್ಯವಾಗುತ್ತದೆ. ಈಮಾನ್ ಒಬ್ಬ ವ್ಯಕ್ತಿಗೆ ನಿಜವಾದ ಧೈರ್ಯ ಮತ್ತು ಶೌರ್ಯವನ್ನು ನೀಡುವ ಶಕ್ತಿಯಾಗಿದೆ. ಇದರ ಉದಾಹರಣೆಯನ್ನು ನಾವು ಸಹಾಬಗಳ ಜೀವನದಲ್ಲಿ ಕಾಣಬಹುದು. ಅವರು ಹಝ್‌ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರೊಂದಿಗೆ ಇದ್ದಾಗ, ಅಂತಹ ಅಸಹಾಯಕ ವ್ಯಕ್ತಿಯೊಂದಿಗೆ ಇರುವುದರಿಂದ ನಾವು ಪ್ರತಿಫಲವನ್ನು ಪಡೆಯುತ್ತೇವೆ ಎಂಬ ಭರವಸೆಯನ್ನು ಅವರಿಗೆ ನೀಡಿದ್ದು ಯಾವ ವಿಷಯವಾಗಿತ್ತು? ಅವರೊಂದಿಗೆ ಇರುವ ಮೂಲಕ ಅವರು ಎಲ್ಲಾ ರಾಷ್ಟಗಳನ್ನು ತನ್ನ ಶತ್ರುಗಳನ್ನಾಗಿ ಮಾಡಿಕೊಂಡಿದ್ದನ್ನು ಬಿಟ್ಟರೆ ಹೊರಗಣ್ಣು ಏನನ್ನೂ ತೋರಿಸಲಿಲ್ಲ, ಅದರ ಪರಿಣಾಮವಾಗಿ ನಾವು ಅದೇ ರೀತಿಯಲ್ಲಿ ದುಃಖ ಮತ್ತು ಕಷ್ಟಗಳ ಪರ್ವತವನ್ನು ನಮ್ಮ ಮೇಲೆ ಅನುಭವಿಸುತ್ತೇವೆ ಅದು ನಮ್ಮನ್ನು ನಾಶಪಡಿಸುತ್ತದೆ, ಹೀಗೆ ನಾವು ನಶಿಸಿಹೋಗುತ್ತೇವೆ ಎಂದು ಸ್ಪಷ್ಟವಾಗಿ ತಿಳಿದುಕೊಂಡಿದ್ದರು. ಆದರೆ ಈ ಸಂಕಟಗಳನ್ನು ಮತ್ತು ಕಷ್ಟಗಳನ್ನು ವ್ಯರ್ಥವೆಂದು ಪರಿಗಣಿಸುವ ಮತ್ತೊಂದು ಕಣ್ಣು ಇತ್ತು ಮತ್ತು ಈ ಮಾರ್ಗದಲ್ಲಿ ಸಾಯುವುದು ಅವನ ಪ್ರಕಾರ ಸಮಾಧಾನ ಮತ್ತು ತೃಪ್ತಿಯ ಮೂಲವಾಗಿತ್ತು. ಈ ಕಾಣುವ ಕಣ್ಣುಗಳ ದೃಷ್ಟಿಗೆ ದೂರವಾದುದನ್ನು ಅವನು ನೋಡಿದನು. ಅದು ಅವರ ವಿಶ್ವಾಸದ ಕಣ್ಣಾಗಿತ್ತು ಮತ್ತು ವಿಶ್ವಾಸದ ಶಕ್ತಿಯಾಗಿತ್ತು ಅದು ಈ ಎಲ್ಲಾ ನೋವು ಮತ್ತು ಸಂಕಟಗಳನ್ನು ಪರಿಪೂರ್ಣವಾಗಿ ವ್ಯರ್ಥವೆಂದು ತೋರಿಸುತ್ತಿತ್ತು. ಅಂತಿಮವಾಗಿ ಈಮಾನ್ (ವಿಶ್ವಾಸವು) ಮೇಲುಗೈ ಸಾಧಿಸಿತು ಮತ್ತು ಅವರಿಗೆ ಈಮಾನ್ ಎಂತಹ ಪವಾಡ ತೋರಿಸಿತು ಎಂದರೆ ಯಾರನ್ನು ಅವರು ಅಪಹಾಸ್ಯ ಮಾಡುತ್ತಿದ್ದರು ಮತ್ತು ಯಾರನ್ನು ಅವರು ದುರ್ಬಲರು ಮತ್ತು ಅಶಕ್ತರು ಎಂದು ಭಾವಿಸುತ್ತಿದ್ದರು ಅವರಿಗೆ ಈಮಾನ್ ಎಲ್ಲಿಂದ ಎಲ್ಲಿಗೆ ತಲುಪಿಸಿತು. ರಹಸ್ಯವಾಗಿದ್ದ ಆ ಪ್ರತಿಫಲವು ಗೋಚರಿಸಿತು, ಆದ್ದರಿಂದ ಜಗತ್ತು ಆ ಪ್ರತಿಫಲಗಳನ್ನು ನೋಡಿತು ಮತ್ತು ಹೌದು, ಇದು ಅದರ ಪ್ರತಿಫಲ ಎಂದು ಅರಿತುಕೊಂಡಿತು. ಈಮಾನ್‌ನ ಕಾರಣದಿಂದ ಸಹಾಬಗಳ ಗುಂಪು ಬೇಸತ್ತು ಹೋಗಲಿಲ್ಲ, ಬದಲಿಗೆ ಈಮಾನ್‌ನ ಬಲದಿಂದ, ಅವರು ದೊಡ್ಡ ದೊಡ್ಡ ಕಾರ್ಯಗಳನ್ನು ಮಾಡಿ ತೋರಿಸಿದರು. ಆದರೂ ಈಡೇರಬೇಕಾದ ಹಕ್ಕನ್ನು ನಾವು ಈಡೇರಿಸಲಿಲ್ಲ ಎಂದೇ ಹೇಳಿದರು. ಈಮಾನ್ (ವಿಶ್ವಾಸವು) ಅವರಿಗೆ ಅಲ್ಲಾಹನ ಮಾರ್ಗದಲ್ಲಿ ತಮ್ಮ ತಲೆಯನ್ನು ನೀಡುವುದು ಮತ್ತು ತಮ್ಮ ಪ್ರಾಣವನ್ನು ತ್ಯಾಗ ಮಾಡುವುದು ಕೀಳು ವಿಷಯವೆಂದು ಭಾವಿಸುವ ಧೈರ್ಯ ನೀಡಿತು ಮತ್ತು ಇಸ್ಲಾಂ ಧರ್ಮದ ಜನರು ಯಾವುದೇ ಫಲಿತಾಂಶವನ್ನು ಕಾಣದಿದ್ದರೂ, ಮುಸ್ಲಿಮರು ಎಂತಹ ನೋವು ಮತ್ತು ಸಂಕಷ್ಟಗಳನ್ನು ಹೊಂದಿದ್ದಾರೆಂದು ನೋಡಿ! ಕೇವಲ **ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್** ಎಂದು ಹೇಳಿದ್ದಕ್ಕಾಗಿ ಅವರು ಶತ್ರುಗಳ ಕೈಯಲ್ಲಿ ಕಷ್ಟಗಳನ್ನು ಸಹಿಸಿಕೊಂಡರು.

*(ಪುಟ ಸಂಖೆ 07 ರಲ್ಲಿ ಮುಂದುವರಿಸಲಾಗಿದೆ)*

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್**.

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್(ಸ) ಹೇಳಿದರು,**

"ಮೊದಲ ಬಾರಿಗೆ ಬೆಳಕು ಹೊರಬಂದಾಗ, ನನಗೆ ಹಿರಾ ಮತ್ತು ಕಸ್ರಾದ ಅರಮನೆಗಳನ್ನು ತೋರಿಸಲಾಯಿತು, ಮತ್ತು ಜಿಬ್ರೀಲ್ ನನಗೆ ಹೇಳಿದರು: ನಿಮ್ಮ ಉಮ್ಮತ್ತಿನವರು ಅವುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ.
ಎರಡನೇ ಬಾರಿಯ ಬೆಳಕಿನಲ್ಲಿ ರೋಮ್ ದೇಶದ ಕೆಂಪು ಅರಮನೆಗಳನ್ನು ನನಗೆ ತೋರಿಸಲಾಯಿತು ಮತ್ತು ನಿಮ್ಮ ಉಮ್ಮತ್ತಿನವರು ಅವುಗಳನ್ನು ಸ್ವಾಧಿನಪಡಿಸಿಕೊಳ್ಳುತ್ತಾರೆ ಎಂದು ಜಿಬ್ರೀಲ್ ನನಗೆ ತಿಳಿಸಿದರು
ಮತ್ತು ಮೂರನೇ ಬಾರಿ ಬೆಳಕು ಹೊರಬಂದಾಗ, ನನಗೆ ಸನ್‌ಆದ ಅರಮನೆಗಳನ್ನು ತೋರಿಸಲಾಯಿತು. ಮತ್ತು ಜಬ್ರೀಲ್ ನನಗೆ ಹೇಳಿದರು: ನಿಮ್ಮ ಉಮ್ಮತಿನವರು ಅವುಗಳನ್ನು ಅಧೀನಪಡಿಸಿಕೊಳ್ಳುತ್ತಾರೆ. ಆದ್ದರಿಂದ ಇದು ನಿಮಗೆ ಸುವಾರ್ತೆಯಾಗಿದೆ.

ಕಂದಕದ ಅಗೆಯುವಿಕೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಪಾಲ್ಗೊಳ್ಳುವಿಕೆ ಮತ್ತು ಅವರ ಪ್ರಾರ್ಥನೆಗಳ ಅನುಗ್ರಹದಿಂದ ಸಹಾಬಿಯರು ತಮ್ಮ ದುಃಖ ಮತ್ತು ಪರಿಶ್ರಮದ ಕಾಠಿಣ್ಯವನ್ನು ಮರೆತುಬಿಡುತ್ತಿದ್ದರು.

**ಅಹ್‌ಝಾಬ್ ಯುದ್ಧಕ್ಕಾಗಿ ಕಂದಕದ ಅಗೆಯುವಿಕೆ ಮತ್ತು ಅದರ ಅಗುವಿಕೆಯ ನಡುವೆ ನಡೆದ ಕೆಲವು ಪವಾಡಗಳ ವಿವರಾತ್ಮಕ ಪ್ರಸ್ತಾವನೆ**

ಅಹ್ಮದಿಯರ ದೃಢ ವಿಶ್ವಾಸ ಮತ್ತು ಲೋಕದ ಸಾಮಾನ್ಯ ಪರಿಸ್ಥಿತಿಗಳಿಗಾಗಿ ದುಆವಿನ ಕೋರಿಕೆ

ಅಲ್ಲಾಹನು ಎಲ್ಲ ಶಕ್ತಿಗಳನ್ನು ಹೊಂದಿದವನಾಗಿದ್ದಾನೆ. ಈಗಲಾದರೂ ಈ ಜನರು ಸುಧಾರಣೆಯ ಕಡೆಗೆ ಗಮನ ನೀಡಿದರೆ ಅಲ್ಲಾಹನು ಅವರನ್ನು ವಿಪತ್ತುಗಳಿಂದ ಹೊರಗೆ ಹಾಕಬಲ್ಲನು. ಅಲ್ಲಾಹನು ಅವರಿಗೆ ಬುದ್ಧಿ ಮತ್ತು ವಿವೇಕವನ್ನು ನೀಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **13-09-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ- بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ.

اِيَّاكَ نَعْبُدُ وَاِيَّاكَ نَسْتَعِيْنُ. اِهْدِنَا الصِّرَاطَ الْمُسْتَقِيْمَ.

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

ಅಹ್‌ಝಾಬ್ ಯುದ್ಧಕ್ಕೆ ಸಂಬಂಧಿಸಿ ಕಳೆದ ಖುತ್ಬದಲ್ಲಿ ಪ್ರಸ್ತಾಪಿಸಲಾಗುತ್ತಿತ್ತು. ಖೈಬರಿನ ಯಹೂದಿಯರ ಒಪ್ಪಂದದ ಉಲ್ಲಂಘನೆ ಮತ್ತು ಹಗೆಯ ಕಾರಣದಿಂದ ಮುಸ್ಲಿಮರ ಮೇಲೆ ದಾಳಿ ನಡೆಸಿ ಅವರನ್ನು ಮುಕ್ತಾಯಗೊಳಿಸಲಿಕ್ಕಾಗಿ ಯಾವ ರೀತಿಯಲ್ಲಿ ಸತ್ಯನಿಷೇಧಿಗಳ ಸೇನೆ ತಯಾರಾಯಿತು ಎಂದು ಹೇಳಲಾಗಿತ್ತು. ಅದರ ಇನ್ನಷ್ಟು ವಿವರಣೆ ಚರಿತ್ರೆಯಿಂದ ಹೀಗೆ ಲಭಿಸುತ್ತದೆ. ಹಝ್ರತ್ ಪೈಗಂಬರ್(ಸ) ಸುಲೈತ್ ಮತ್ತು ಸುಫ್‌ಯಾನ್ ಬಿನ್ ಔಫ್ ಅಸ್ಲಮಿಯನ್ನು ಅವರ ಸೇನೆಯ ಬಗ್ಗೆ ಮಾಹಿತಿ ಪಡೆಯಲು ಕಳುಹಿಸಿದರು. ಅವರಿಬ್ಬರೂ ಬೈದಾ ಎಂಬ ಸ್ಥಳಕ್ಕೆ ತಲುಪಿದಾಗ, ಬೈದಾ ಎಂಬುದು ಮಕ್ಕಾ ಮತ್ತು ಮದೀನಾದ ನಡುವಿನ ಧುಲ್ ಹಲೀಫಾದಿಂದ ಮುಂದೆ ಒಂದು ಬಯಲು ಪ್ರದೇಶವಾಗಿದೆ ಮತ್ತು ಧುಲ್-ಹಲೀಫಾ ಮದೀನಾದಿಂದ ಆರರಿಂದ ಏಳು ಮೈಲುಗಳಷ್ಟು ದೂರದಲ್ಲಿದೆ. ಆದಾಗ್ಯೂ, ಅವರಿಬ್ಬರೂ ಹೋದಾಗ ಶತ್ರುಗಳು ಅವರನ್ನು ಕಂಡರು. ಹೀಗೆ ಅವರು ಹೋರಾಡುತ್ತಾ ಹುತಾತ್ಮರಾದರು. ಅವರಿಬ್ಬರನ್ನೂ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಕರೆದೊಯ್ದು ಅವರಿಬ್ಬರನ್ನು ಒಂದೇ ಖಬರ್‌ನಲ್ಲಿ ದಫನ್ ಮಾಡಲಾಯಿತು. ಕಂದಕವನ್ನು ಅಗೆಯುವ ತೀರ್ಮಾನ ಮಾಡಲಾದಾಗ ಹಝ್ರತ್ ಪೈಗಂಬರ್(ಸ) ತನ್ನ ಕುದುರೆಯಲ್ಲಿ ಸವಾರರಾದರು. ಅವರ ಜೊತೆಗೆ ಅನೇಕ ಮುಹಾಜಿರರು ಮತ್ತು ಅನ್ಸಾರರು ಇದ್ದರು. ಹಝ್ರತ್ ಪೈಗಂಬರ್(ಸ) ಸೇನೆಯ ತಂಗುವಿಕೆಗೆ ಜಾಗವನ್ನು ಹುಡುಕಿದಾಗ ಅವರು(ಸ) 'ಸಲಅ' ಪರ್ವತವನ್ನು ನಿಮ್ಮ ಬೆನ್ನಿನ ಕಡೆಗೆ ಇರಿಸಬೇಕು ಮತ್ತು ಮಝಾಝ್‌ನಿಂದ ಝುಬಾಬ್ ಮತ್ತು ರಾತಿಜ್‌ವರೆಗೆ ಕಂದಕವನ್ನು ಅಗೆಯಬೇಕು ಎಂದು ಎಲ್ಲದಕ್ಕಿಂತ ಉತ್ತಮ ಜಾಗವೆಂದು ಪರಿಗಣಿಸಿದರು. ಮಝಾಝ್ ಎಂಬುದು ಮದೀನಾದಲ್ಲಿ ಸಲಅ ಪರ್ವತದ ಬಳಿಯ ಒಂದು ಸ್ಥಳವಾಗಿತ್ತು ಮತ್ತು ಝುಬಾಬ್ ಎಂಬುದು ಮದೀನಾ ಬಳಿಯ ಪರ್ವತದ ಹೆಸರಾಗಿತ್ತು. ರಾತಿಜ್ ಎಂಬುದು ಮದೀನಾದ ಕೋಟೆಗಳಲ್ಲಿ ಒಂದಾಗಿತ್ತು. ಅದು ಯಹೂದಿಗಳ ಕೋಟೆಯಾಗಿತ್ತು. ಝುಬಾಬ್‌ನ ಪೂರ್ವಕ್ಕೆ ಒಂದು ಸಣ್ಣ ಪರ್ವತವಿತ್ತು ಎಂದೂ ಸಹ ಹೇಳಲಾಗುತ್ತದೆ. ಹೀಗೆ, ಆ ದಿನ ಕಂದಕದ ಕೆಲಸ ಪ್ರಾರಂಭವಾಯಿತು ಮತ್ತು ಮುಸ್ಲಿಮರು ಅನೇಕ ಅಗೆಯುವ ಉಪಕರಣಗಳು, ಗುದ್ದಲಿಗಳು, ದೊಡ್ಡ ಕೊಡಲಿಗಳು, ಸಲಿಕೆಗಳು ಇತ್ಯಾದಿಗಳನ್ನು ಬನೂ ಖುರೈಝಾ ಅವರಿಂದ ಬಡಿಗೆಗೆ ಪಡೆದರು ಮತ್ತು ಎಲ್ಲೆಡೆ ಕಂದಕವನ್ನು ಅಗೆಯುವ ಕೆಲಸವನ್ನು ಹಝ್ರತ್ ಪೈಗಂಬರ್(ಸ) ಒಂದು ಸಮುದಾಯಕ್ಕೆ ಒಪ್ಪಿಸಿದರು. ಹಝ್ರತ್ ಪೈಗಂಬರ್(ಸ) ಸ್ವತಃ ಕೂಡ ಅಗೆಯುವ ಕೆಲಸದಲ್ಲಿ ಪಾಲ್ಗೊಂಡಿದ್ದರು. ಅವರು ಮಣ್ಣನ್ನು ತನ್ನ ಬೆನ್ನ ಮೇಲೆ ಇರಿಸುತ್ತಿದ್ದರು. ಅವರ ಬೆನ್ನು ಮತ್ತು ಹೊಟ್ಟೆ ಮಣ್ಣಿನಿಂದ ಆವರಿಸುತ್ತಿತ್ತು. ಮುಸ್ಲಿಮರು ತಮಗೆ ಒಪ್ಪಿಸಲಾದ ಕೆಲಸವನ್ನು ಮುಕ್ತಾಯಗೊಳಿಸಿದ ನಂತರ ಇತರರ ನೆರವಿಗಾಗಿ ದಾವಿಸುತ್ತಿದ್ದರು. ಹೀಗೆ ಕಂದಕದ ಕೆಲಸ ಮುಕ್ತಾಯಗೊಂಡಿತು. ಕಂದಕವನ್ನು ಅಗೆಯುವುದರಲ್ಲಿ ಮುಸ್ಲಿಮರಲ್ಲಿ ಯಾರೂ ಹಿಂದೆ ಉಳಿದಿರಲಿಲ್ಲ. ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರಿಗೆ ಬುಟ್ಟಿಗಳು ಲಭಿಸದೇ ಇರುವಾಗ ಅವರು ತಮ್ಮ ಬಟ್ಟೆಗಳಿಗೆ ಮಣ್ಣನ್ನು ಹಾಕಿ ಸಾಗಿಸುತ್ತಿದ್ದರು. (ಸಬ್ಲುಲ್ ಹುದಾ ವರ್‌ರಶಾದ್. ಸಂಪುಟ-4, ಪುಟ-364-365, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಫಹಾರ್ಂಗ್ ಸೀರತ್ ಪುಟ 105, 125, 129, 265 ಜ್ವಾರ್ ಅಕಾಡೆಮಿ ಕರಾಚಿ) (ಖುಲಾಸತುಲ್ ವಫಾ ಬಿಅಖ್ಬಾರಿಲ್ ಮುಸ್ತಫಾ, ಪುಟ-553-554, ಮಕ್ತಬ ಅಲ್‌ಇಲ್ಮೀಯಾ ಮದೀನ ಮುನವ್ವರ)

ಇದ ವಿವರಣೆಯಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಹೇಳುತ್ತಾರೆ: "ಇಷ್ಟು ದೊಡ್ಡ ಸೇನೆಯ ಚಲನವಲನಗಳನ್ನು ರಹಸ್ಯವಾಗಿ ಇಡುವುದು ಸತ್ಯನಿಷೇಧಿಗಳಿಗೆ ಕಷ್ಟಕರವಾಗಿತ್ತು. ಮಾತ್ರವಲ್ಲ, ಹಝ್ರತ್ ಪೈಗಂಬರ್(ಸ)ರ ಗುಪ್ತಚರ ವಿಭಾಗ ಬಹಳ ಉತ್ತಮವಾಗಿತ್ತು. ಖುರೈಶಿಯರ ಸೇನೆ ಮಕ್ಕದಿಂದ ಹೊರಟ ಕೂಡಲೇ ಹಝ್ರತ್ ಪೈಗಂಬರ್(ಸ)ರಿಗೆ ಅದರ ಸುದ್ದಿ ತಲುಪಿತು. ಅದರಂತೆ ಹಝ್ರತ್ ಪೈಗಂಬರ್(ಸ) ಸಹಾಬಿಯರೊಡನೆ ಸಮಾಲೋಚನೆ ನಡೆಸಿದರು. ಈ ಸಮಾಲೋಚನೆಯಲ್ಲಿ ಇರಾನಿನ ನಿಷ್ಠಾವಂತ ಸಹಾಬಿಯಾದ ಸಲ್ಮಾನ್ ಫಾರಸಿ(ರ) ಸಹ ಇದ್ದರು..... ಅವರಿಗೆ ಅರೇಬಿಯೇತರ ಯುದ್ಧ ವಿಧಾನದ ಬಗ್ಗೆ ಗೊತ್ತಿತ್ತು. ಅವರು ಹೀಗೆ ಸಲಹೆ ಕೊಟ್ಟರು: ಮದೀನದ ತೆರೆದ ಭಾಗದ ಮುಂದೆಯಾಗಿ ಒಂದು ಉದ್ದದ ಮತ್ತು ಆಳವಾದ ಕಂದಕವನ್ನು ಅಗೆದು ಮದೀನವನ್ನು ಸುರಕ್ಷಿತಗೊಳಿಸಬೇಕು. ಕಂದಕ ಯೋಚನೆಯು ಅರಬರಿಗೆ ಹೊಸದಾಗಿತ್ತು. ಹಝ್ರತ್ ಪೈಗಂಬರ್(ಸ) ಈ ಸಲಹೆಯನ್ನು ಒಪ್ಪಿದರು."

ಕಳೆದ ವಾರದ ಖುತ್‌ಬ ಜುಮುಅದಲ್ಲಿಯು ಇದರ ಬಗ್ಗೆ ಪ್ರಸ್ತಾಪಿಸಲಾಗಿತ್ತು, ಹಝ್ರತ್ ಪೈಗಂಬರ್(ಸ) ಅವರಿಗೆ ಈ ವಿಧಾನವು

ಸರಿಯಾಗಿದೆ ಎಂದು ಸರ್ವಶಕ್ತನಾದ ಅಲ್ಲಾಹನೂ ತಿಳಿಸಿದ್ದನು. ಆದಾಗ್ಯೂ, "ಮದೀನದ ಪಟ್ಟಣ ಮೂರು ಕಡೆಯಿಂದ ಸಾಕಷ್ಟು ಮಟ್ಟಿಗೆ ಸುರಕ್ಷಿತವಾಗಿತ್ತು, ಅಂದರೆ, ಮನೆಗಳ ನಿರಂತರ ಗೋಡೆಗಳು ಮತ್ತು ದಟ್ಟವಾದ ಮರಗಳು ಮತ್ತು ಬಂಡೆಗಳ ಸರಣಿಯಿಂದಾಗಿ, ಈ ಬದಿಗಳು ಅವಿಶ್ವಾಸಿಗಳ ಸೈನ್ಯದ ಹಠಾತ್ ದಾಳಿಯಿಂದ ಸುರಕ್ಷಿತವಾಗಿದ್ದವು. ಮತ್ತು ಆದರೆ ಸಿರಿಯಗೆ ಹೋಗುವ ಭಾಗದಿಂದ ಶತ್ರುಗಳು ಒಂದಾಗಿ ಮದೀನದ ಮೇಲೆ ದಾಳಿ ನಡೆಸಬಹುದಾಗಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಈ ಅಸುರಕ್ಷಿತ ಭಾಗದಲ್ಲಿ ಕಂದಕವನ್ನು ಅಗೆಯಲು ಆದೇಶ ನೀಡಿದರು. ಹಝ್ರತ್ ಪೈಗಂಬರ್(ಸ) ಸ್ವತಃ ತನ್ನ ಮೇಲ್ನೋಟದಲ್ಲಿ ಪ್ರತಿಯೊಂದು ಸ್ಥಳದಲ್ಲಿ ಗುರುತುಗಳನ್ನು ಹಾಕಿ ಕೆಲಸಗಳ ವಿಂಗಡನೆಯ ತತ್ವದ ಪ್ರಕಾರ ಕಂದಕವನ್ನು ಹದಿನೈದು ಅಡಿಯ ಬೇರೆ ಬೇರೆ ಭಾಗಗಳನ್ನಾಗಿ ಮಾಡಿ ಪ್ರತಿಯೊಂದು ಭಾಗವನ್ನು ಹತ್ತು ಹತ್ತು ಸಹಾಬಿಯರಿಗೆ ಒಪ್ಪಿಸಿದರು. ಈ ಸಂಘದ ವಿಂಗಡನೆಯ ವೇಳೆ ಸಲ್ಮಾನ್ ಫಾರಸಿ(ರ)ರನ್ನು ಯಾವ ಸಂಘದಲ್ಲಿ ಸೇರಿಸಬೇಕು ಎಂಬ ಕುತೂಹಲಕರವಾದ ಒಂದು ಭಿನ್ನಾಭಿಪ್ರಾಯ ಎದ್ದಿತು. ಅವರನ್ನು ಮುಹಾಜಿರ್ ಎಂದು ಗಣಿಸಬೇಕೇ ಅಥವಾ ಇಸ್ಲಾಮಿನ ಆಗಮನಕ್ಕೆ ಮುಂಚಿತವಾಗಿಯೇ ಅವರು ಮದೀನದಲ್ಲಿ ನೆಲೆಸಿದ್ದ ಕಾರಣದಿಂದ ಅನ್ಸಾರರಲ್ಲಿ ಸೇರಿಸಬೇಕೇ ಎಂಬ ಚರ್ಚೆ ನಡೆಯಿತು. ಕೊನೆಗೆ ಈ ಭಿನ್ನಾಭಿಪ್ರಾಯವನ್ನು ಹಝ್ರತ್ ಪೈಗಂಬರ್(ಸ)ರ ಮುಂದೆ ಸಮರ್ಪಿಸಲಾಯಿತು. ಹಝ್ರತ್ ಪೈಗಂಬರ್(ಸ) ಮುಗುಳ್ನಗುತ್ತಾ ಹೀಗೆ ಹೇಳಿದರು: ಸಲ್ಮಾನ್ ಎರಡು ವಿಭಾಗಗಳಿಗೂ ಸೇರಿದವರಲ್ಲ. **ಸಲ್ಮಾನು ಮಿನ್ನಾ ಅಹ್ಲುಲ್ ಬೈತಿ**. ಎಂದರೆ ಅವರನ್ನು ನನ್ನ ಕುಟುಂಬದಲ್ಲಿ ಸೇರಿಸಬೇಕು. ಅಂದಿನಿಂದ ಸಲ್ಮಾನ್(ರ)ರನ್ನು ಹಝ್ರತ್ ಪೈಗಂಬರ್(ಸ)ರ ಮನೆಯ ಸದಸ್ಯ ಎಂದು ಗಣಿಸಲಾಗುತ್ತಿತ್ತು.

ಕಂದಕವನ್ನು ಮಾಡಬೇಕು ಎಂಬ ನಿರ್ಧಾರವನ್ನು ತೆಗೆದುಕೊಂಡ ನಂತರ ಸಹಾಬಿಯರ ಸಂಘ ಕಾರ್ಮಿಕರ ಬಟ್ಟೆಯನ್ನು ಧರಿಸಿ ಕೆಲಸದ ಮೈದಾನಕ್ಕೆ ಹೊರಟರು. ಅಗೆಯುವ ಕೆಲಸ ಸುಲಭವಾಗಿರಲಿಲ್ಲ. ಮಾತ್ರವಲ್ಲ ಅದು ಚಳಿಗಾಲವಾಗಿತ್ತು. ಅದರ ಕಾರಣದಿಂದ ಆ ದಿನಗಳಲ್ಲಿ ಸಹಾಬಿಯರು ಕಠಿಣವಾದ ಕಷ್ಟಗಳನ್ನು ಅನುಭವಿಸಿದರು. ಇತರ ಕೆಲಸಗಳು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದ ಕಾರಣದಿಂದ ಆ ದಿನಗಳಲ್ಲಿ ಹಸಿವನ್ನು ಕೂಡ ಸಹಿಸಬೇಕಾಗಿ ಬಂದಿತು. ಸಹಾಬಿಯರ ಬಳಿ ಸೇವಕರು ಮತ್ತು ಗುಲಾಮರು ಕೂಡ ಇದ್ದಿರಲಿಲ್ಲ. ಆದ್ದರಿಂದ ಎಲ್ಲ ಸಹಾಬಿಯರಿಗೆ ಸ್ವತಃ ತಮ್ಮ ಕೆಲಸಗಳನ್ನು ಮಾಡಬೇಕಾಗಿ ಬರುತ್ತಿತ್ತು. ಹಝ್ರತ್ ಪೈಗಂಬರ್(ಸ) ಬಹುತೇಕ ಸಮಯ ಕಂದಕದ ಸಮೀಪ ಕಳೆಯುತ್ತಿದ್ದರು. ಕೆಲವೊಮ್ಮೆ ಸಹಾಬಿಯರ ಜೊತೆ ಸ್ವತಃ ಅಗೆಯುವ ಕೆಲಸ ಮತ್ತು ಮಣ್ಣು ತೆಗೆಯುವ ಕೆಲಸವನ್ನು ಮಾಡುತ್ತಿದ್ದರು. (ಸೀರತ್ ಖಾತಮುನ್ನಬಿಯೀನ್(ಸ), ಹಝ್ರತ್ ಸಾಹಿಬ್‌ಝಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ-574-575)

ಕಂದಕವನ್ನು ಅಗೆಯುವಾಗ ಅವರನ್ನು ಉಲ್ಲಾಸವಾಗಿರಿಸಲು ಕವಿತೆಗಳನ್ನು ಸಹ ಓದಲಾಗುತ್ತಿತ್ತು. ಅದರ ವಿವರಣೆಯಲ್ಲಿ ಹೀಗೆ ಬರೆಯಲಾಗಿದೆ: ಸಹಲ್ ಬಿನ್ ಸಾಅದ್ ಮತ್ತು ಅನಸ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನಮ್ಮ ಬಳಿಗೆ ಬಂದಾಗ, ನಾವು ಕಂದಕವನ್ನು ಅಗೆದು ನಮ್ಮ ಹೆಗಲ ಮೇಲೆ ಮಣ್ಣನ್ನು ಸರಿಸುತ್ತಿದ್ದೆವು. ಹಝ್ರತ್ ಪೈಗಂಬರ್(ಸ) ಅವರು ನಮ್ಮ ಈ ಕಷ್ಟ ಮತ್ತು ಹಸಿವು ಕಂಡು ಹೇಳಿದರು:

**ಅಲ್ಲಾಹುಮ್ಮ ಲಾ ಐಷ ಇಲ್ಲಾ ಐಷುಲ್ ಆಖಿರ**
**ಫಗ್‌ಫಿರಿಲ್ ಅನ್ಸಾರ ವಲ್ ಮುಹಾಜಿರಹು**

ಅಂದರೆ: ಓ ಅಲ್ಲಾಹನೇ!! ಐಷಾರಾಮಿಯ ಜೀವನವು ಪರಲೋಕದ ಐಷಾರಾಮಿ ಮಾತ್ರ ಆಗಿದೆ. ಆದ್ದರಿಂದ ನೀನು ಅನ್ಸಾರ್ ಹಾಗೂ ಮುಹಾಜಿರೀನರನ್ನು ಕ್ಷಮಿಸು. ಅದಕ್ಕೆ ಎಲ್ಲಾ ಸಹಾಬಗಳು ಹಝ್ರತ್ ಪೈಗಂಬರ್(ಸ) ಅವರನ್ನು ಉತ್ತರಿಸುತ್ತಾ ಹೇಳಿದರು:

**ನಹ್‌ನುಲ್ಲಝೀನ ಬಾಯಊ ಮುಹಮ್ಮದ**
**ಅಲಲ್ ಜಿಹಾದಿ ಮಾ ಬಖೀನಾ ಅಬದ**

ಅಂದರೆ: ನಾವು ಬದುಕಿರುವವರೆಗೂ ಜಿಹಾದ್‌ನಲ್ಲಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬೈಅತ್ ಮಾಡಿದ ಜನರಾಗಿದ್ದೇವೆ.

ಹಝ್ರತ್ ಬಾರಾ ಬಿನ್ ಆಝಿಬ್(ರ) ವರದಿ ಮಾಡುತ್ತಾರೆ ಅವರು ಹೇಳುತ್ತಾರೆ: ಕಂದಕದ ದಿನದಂದು ನಾವು ಹಝ್ರತ್ ಪೈಗಂಬರ್(ಸ) ಅವರನ್ನು ಮಣ್ಣು ಎತ್ತುತ್ತಿರುವುದನ್ನು ನೋಡಿದ್ದೇವೆ ಅದರಿಂದಾಗಿ ಅವರ ಅನುಗ್ರಹದಾಯಕ ಹೊಟ್ಟೆಯ ಬಿಳಿ ಬಣ್ಣವು ಮಣ್ಣಿನಿಂದ ಮರೆಯಾಗಿತ್ತು. ಅವರು(ಸ) ಇಬ್ನ್ ರವಾಹಾ ಅವರ ಈ ಕವಿತೆಗಳನ್ನು ಓದುವುದನ್ನು ನಾನು ಕೇಳಿದೆ:

**ಅಲ್ಲಾಹಿ ಲೌಲಾ ಮಹ್‌ತದೈನಾ**
**ವಲಾ ರಸದ್ದಖ್‌ನಾ ವಲಾ ಸಲ್ಲೈನಾ**
**ಫಅನ್‌ಝಿಲನ್ ಸಕೀನತನ್ ಅಲೈನಾ**
**ವ ಸಬ್ಬಿತಿಲ್ ಅಖ್ದಾಮ ಇನ್ ಲಾಖೀನಾ**
**ವಲ್‌ಮುಶ್ರಿಕೀನ ಖದ್ ಬಗೌ ಅಲೈನಾ**
**ಇಝಾ ಅರಾದೂ ಫಿತ್ನತನ್ ಅಬೀನಾ**

ಅಂದರೆ: ಓ ನಮ್ಮ ಪ್ರಭೂ! ನಿನ್ನ ಅನುಗ್ರಹವಿಲ್ಲದಿದ್ದರೆ ನಮಗೆ ಮಾರ್ಗದರ್ಶನ ಸಿಗುತ್ತಿರಲಿಲ್ಲ ಮತ್ತು ನಮಗೆ ದಾನ ಮಾಡಲು ಮತ್ತು ನಿನ್ನನ್ನು ಆರಾಧಿಸಲು ನಮಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಓ ದೇವರೇ! ನೀನು ನಮ್ಮನ್ನು ಈ ಮಟ್ಟಕ್ಕೆ ತಂದಾಗ, ಈಗ ಈ ಸಂಕಷ್ಟದ ಸಮಯದಲ್ಲಿ ನಮ್ಮ ಹೃದಯಕ್ಕೆ ಶಾಂತಿಯನ್ನು ನೀಡು ಮತ್ತು ನಾವು ಶತ್ರುಗಳನ್ನು ಎದುರಿಸಿದರೆ ನಮ್ಮ ಪಾದಗಳನ್ನು ಸ್ಥಿರವಾಗಿರಿಸು. ಈ ಜನರು ಕ್ರೌರ್ಯ ಮತ್ತು ದಬ್ಬಾಳಿಕೆಯ ಬಣ್ಣದಲ್ಲಿ ನಮ್ಮ ಮೇಲೆ ದಾಳಿ ಮಾಡುತ್ತಿದ್ದಾರೆ ಮತ್ತು ನಮ್ಮ ಧರ್ಮದಿಂದ ನಮ್ಮನ್ನು ಅವಿಶ್ವಾಸಿಗೊಳಿಸುವುದು ಅವರ ಉದ್ದೇಶವಾಗಿದೆ ಎಂದು ನಿನಗೆ ತಿಳಿದಿದೆ, ಆದರೆ, ಓ ನಮ್ಮ ಪ್ರಭೂ! ನಿನ್ನ ಅನುಗ್ರಹದಿಂದ, ಅವರು ನಮ್ಮನ್ನು ಅವಿಶ್ವಾಸಿಗಳನ್ನಾಗಿ ಮಾಡಲು ಯಾವುದೇ ಯೋಜನೆಯನ್ನು ತೆಗೆದುಕೊಂಡಾಗ, ನಾವು ಅವರ ಯೋಜನೆಯನ್ನು ದೂರದಿಂದ ತಿರಸ್ಕರಿಸುತ್ತೇವೆ ಮತ್ತು ಅವರ ಪ್ರಲೋಭನೆಗೆ ಬೀಳಲು ನಿರಾಕರಿಸುತ್ತೇವೆ ಮತ್ತು **ಅಬೈನಾ ಅಬೈನಾ** ಎಂಬ ಪದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಉಚ್ಚ ಧ್ವನಿಯಲ್ಲಿ ಹೇಳುತ್ತಿದ್ದರು. ಒಂದು ವರದಿಯ ಪ್ರಕಾರ ಕಾವ್ಯದ ಕೊನೆಯಲ್ಲಿ ಧ್ವನಿಯನ್ನು ದೀರ್ಘಗೊಳಿಸುತ್ತಿದ್ದರು ಎಂದು ಹೇಳಲಾಗಿದೆ.

ಆದಾಗ್ಯೂ, ಕಂದಕವನ್ನು ಅಗೆಯುವುದು ಶ್ರಮದಾಯಕ ಕೆಲಸವಾಗಿತ್ತು ಮತ್ತು ಇತರ ಸಹಾಬೀಯರಂತೆ ಹಝ್ರತ್ ಪೈಗಂಬರ್(ಸ) ಅವರು ಕಂದಕವನ್ನು ಅಗೆಯುವಲ್ಲಿ ತೊಡಗಿದ್ದರು. ಕೆಲವೊಮ್ಮೆ ಗುದ್ದಲಿಯನ್ನು ಬಳಸುತ್ತಿದ್ದರು ಮತ್ತು ಕೆಲವೊಮ್ಮೆ ಅವರು ಸಲಿಕೆಯಿಂದ ಮಣ್ಣನ್ನು ಸಂಗ್ರಹಿಸುತ್ತಿದ್ದರು ಮತ್ತು ಕೆಲವೊಮ್ಮೆ ಅವರು ಬುಟ್ಟಿಯಲ್ಲಿ ಮಣ್ಣನ್ನು ಸಾಗಿಸುತ್ತಿದ್ದರು. ಒಂದು ದಿನ ಹಝ್ರತ್ ಪೈಗಂಬರ್(ಸ) ಅವರು ತುಂಬಾ ದಣಿದಿದ್ದರಿಂದ ಕುಳಿತುಕೊಂಡರು. ತದನಂತರ ಅವರು ತಮ್ಮ ಎಡಭಾಗದಲ್ಲಿದ್ದ ಕಲ್ಲಿನ ಸಹಾಯದಿಂದ ನಿದ್ರಿಸಿದಾಗ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರ ತಲೆಯ ಬದಿಯಲ್ಲಿ ನಿಂತು ಜನರನ್ನು ಅವರ ಬಳಿಯಿಂದ ಅವರು(ಸ) ಎಚ್ಚರಗೊಳಿಸದಂತೆ ತಡೆಯುತ್ತಿದ್ದರು. ಸ್ವಲ್ಪ ಸಮಯದ ನಂತರ ಎಚ್ಚರವಾದಾಗ, ಅವರು(ಸ) ಬೇಗನೆ ಎದ್ದು ಹೇಳಿದರು: ನೀವು ನನ್ನನ್ನು ಏಕೆ ಎಬ್ಬಿಸಲಿಲ್ಲ? ನಾನು ಮಲಗಿದ್ದೆ, ನೀವು ನನ್ನನ್ನು ಏಕೆ ಎಬ್ಬಿಸಲಿಲ್ಲ? ತದನಂತರ ಅವರು(ಸ) ದೊಡ್ಡ ಕೊಡಲಿಯನ್ನು ಎತ್ತಿಕೊಂಡು ನೆಲದ ಮೇಲೆ ಹೊಡೆಯಲು ಪ್ರಾರಂಭಿಸಿದರು ಅಂದರೆ ಕೆಲಸ ಮಾಡಲು ಪ್ರಾರಂಭಿಸಿದರು. ಕಂದಕದ ಅಗೆಯುವಿಕೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಪಾಲ್ಗೊಳ್ಳುವಿಕೆ ಮತ್ತು ಅವರ ಪ್ರಾರ್ಥನೆಗಳ ಅನುಗ್ರಹದಿಂದ ಸಹಾಬಿಯರು ತಮ್ಮ ದುಃಖ ಮತ್ತು ಪರಿಶ್ರಮದ ಕಾಠಿಣ್ಯವನ್ನು ಮರೆತುಬಿಡುತ್ತಿದ್ದರು. ಅಲ್ಲಿ ಒಂದೆಡೆ ಪರಿಶುದ್ಧವಾದ ಪದ್ಯಾಲಾಪನೆ ಆಗುತ್ತಿತ್ತು. ಮತ್ತೊಂದೆಡೆ ಹಗುರವಾದ ರೀತಿಯಲ್ಲಿ ಹಾಸ್ಯವೂ ನಡೆಯುತ್ತಿತ್ತು. ಹೀಗೆ ಒಮ್ಮೆ ಹಝ್ರತ್ ಝೈದ್ ಬಿನ್ ಸಾಬಿತ್(ರ) ಅವರು ಕಂದಕವನ್ನು ಅಗೆಯುವಾಗ ಕಂದಕದೊಳಗೆ ನಿದ್ರೆಗೆ ಜಾರಿದರು, ಅವರ ಸಹಚರರೊಬ್ಬರು ಅವರ ಅಗೆಯುವ ಸಾಧನವನ್ನು ತಮಾಷೆಗಾಗಿ ತೆಗೆದುಕೊಂಡರು ಮತ್ತು ಅವರು ಎಚ್ಚರಗೊಂಡಾಗ, ಅವರು ತಮ್ಮ ಉಪಕರಣಗಳನ್ನು ಸಿಗದೆ ಇದ್ದಾಗ ಅವರು ಭಯಪಟ್ಟರು ಮತ್ತು ಇತರ ಸ್ನೇಹಿತರು ಈ ಸಮಸ್ಯೆಯನ್ನು ಆನಂದಿಸಲು ಪ್ರಾರಂಭಿಸಿದರು. ಹಝ್ರತ್ ಪೈಗಂಬರ್(ಸ) ಅವರಿಗೆ ಇದ್ ಬಗ್ಗೆ ತಿಳಿದಾಗ, ಅವರು ಹಝ್ರತ್ ಝೈದ್(ರ) ಅವರಿಗೆ ಹೇಳಿದರು. ಓ ಹುಡುಗನೇ!! ನೀನು ನಿನ್ನ ಉಪಕರಣಗಳ ಬಗ್ಗೆ ಚಿಂತಿಸದೇ ಮಲಗಿದ್ದೀಯ. ಒಂದು ವರದಿಯ ಪ್ರಕಾರ: ಹಝ್ರತ್ ಪೈಗಂಬರ್(ಸ) ಅವರು ಸ್ವತಃ ಹಝ್ರತ್ ಝೈದ್(ರ)ರ ಬಳಿಗೆ ಬಂದು ಮುಗುಳುನಗುತ್ತಾ ಹೇಳಿದರು:**ಯಾ ಅಬಾ ರುಖಾದ್!** ಓ ನಿದ್ರೆಯ ತಾಯಿ! ಆದರೆ, ಅದೇ ಸಮಯದಲ್ಲಿ, ಅವರು ಅಂತಹ ಹಾಸ್ಯವನ್ನು ಯುಕ್ತಿಯ ರೀತಿಯಲ್ಲಿ ಸರಿಪಡಿಸುತ್ತಾ ಅವರು ಹೇಳಿದರು: ಝೈದ್‌ನ ಉಪಕರಣಗಳ ಬಗ್ಗೆ ಯಾರಾದರೂ ತಿಳಿದಿದ್ದಾರೆಯೇ? ಅದಕ್ಕೆ ಒಬ್ಬ ವ್ಯಕ್ತಿ ಹೇಳಿದನು: ಹುಝೂರ್(ಸ) ಅವರ ಸರಕುಗಳು ನನ್ನ ಬಳಿ ಇದೆ, ನಾನು ಅವುಗಳನ್ನು ಎತ್ತಿಕೊಂಡಿದ್ದೇನೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಯಾವ ಮುಸಲ್ಮಾನನಿಗೂ

ಈ ರೀತಿ ತೊಂದರೆ ನೀಡಬಾರದು. ಅವರ ಶಸ್ತ್ರಾಸ್ತ್ರ ಮತ್ತು ಉಪಕರಣಗಳನ್ನು ತೆಗೆದುಕೊಳ್ಳಬಾರದು. (ಸೀರತ್ ಅಲ್-ಹಲ್ಬಿಯಾ, ಸಂಪುಟ-2, ಪುಟ-420) (ಸಬ್ಲುಲ್ ಹುದಾ, ಸಂಪುಟ-4, ಪುಟಗಳು-365 ರಿಂದ 367, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಸಹಾಬಿಯರ ನಿರಂತರವಾದ ದಿನ ರಾತ್ರಿಗಳ ಪರಿಶ್ರಮ ಮತ್ತು ಹಝ್ರತ್ ಪೈಗಂಬರ್(ಸ)ರ ಪ್ರಾರ್ಥನೆಗಳ ಅನುಗ್ರಹದಿಂದ ಕಂದಕ ಪೂರ್ತಿಯಾಯಿತು. ಮುಸ್ಲಿಮರು ಕಂದಕವನ್ನು ಅಗೆದು ಅದನ್ನು ಭದ್ರಪಡಿಸಿದರು. ಇದು ಪೂರ್ತಿಯಾಗಲು ಹಿಡಿದ ಕಾಲಾವಧಿಯ ಬಗ್ಗೆ ವಿವಿಧ ವರದಿಗಳು ಇವೆ. 15 ದಿನಗಳು ಅಥವಾ ಒಂದು ತಿಂಗಳು ಹಿಡಿದಿತ್ತು ಎಂಬ ವರದಿಗಳನ್ನು ಹೆಚ್ಚು ಒಪ್ಪಲಾಗುತ್ತದೆ.
(ಸೀರತ್ ಅಲ್-ಹಲ್ಬಿಯಾ, ಸಂಪುಟ-2, ಪುಟ-422, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಈ ಕಂದಕದ ಉದ್ದ ಸುಮಾರು ಆರು ಸಾವಿರ ಗಜಗಳು ಅಥವಾ ಮೂರುವರೆ ಮೈಲುಗಳಷ್ಟು ಇತ್ತು. ಅಗಲ 13, 14 ಅಡಿ ಮತ್ತು ಆಳ ಹತ್ತು ಹನ್ನೊಂದು ಅಡಿ ಇತ್ತು. (ಅಟ್ಲಾಸ್ ಸೀರತ್ ನಬಿ ಸಲ್ಲಲ್ಲಾಹು ಅಲೈಹಿ ವಾ ಸಲ್ಲಂ, ಪುಟ-278, ದಾರುಸ್ಸಲಾಮ್) (ಮುಹಮ್ಮದ್ ಅಹ್ಮದ್ ಬಾಶ್ಮಾಯಿಲ್ ಅವರಿಂದ ಘಝ್ವಾ ಎ ಅಹ್‌ಝಾಬ್, ಪುಟ-171, ನಫೀಸ್ ಅಕಾಡೆಮಿ, ಕರಾಚಿ) (ಅಸ್ಸಹೀಹ್ ಮಿನ್ ಸೀರತುನ್ನಬವೀ(ಸ), ಸಂಪುಟ-10, ಪುಟ-208, ಅಲ್ ಮರ್ಕಝುಲ್ ಇಸ್ಲಾಮಿ ಲಿದ್ದರಾಸಾತ್)

ಈ ಉದ್ದವಾದ ಕಂದಕವು ಬುತ್‌ಹಾನ್ ಕಣಿವೆಯ ನೀರಿನ ನಿರಂತರ ಹರಿವು ಮತ್ತು ಕತ್ತರಿಸುವಿಕೆಯಿಂದಾಗಿ ಕ್ರಮೇಣ ಕಣ್ಮರೆಯಾಗುವವರೆಗೂ ಶತಮಾನಗಳವರೆಗೆ ಅಸ್ತಿತ್ವದಲ್ಲಿತ್ತು. ಮದೀನಾದ ಮೂರು ಪ್ರಸಿದ್ಧ ಕಣಿವೆಗಳಲ್ಲಿ ಬುತ್‌ಹಾನ್ ಕೂಡ ಒಂದಾಗಿತ್ತು. ಇನ್ನೆರಡು ಕಣಿವೆಗಳೆಂದರೆ ಅಖೀಖ್ ಮತ್ತು ಕನಾತ್ ಕಣಿವೆ ಎಂದಾಗಿತ್ತು.

(ಫರ್ಹಾಂಗ್ ಸೀರತ್, ಪುಟ 58-59, ಝುವಾರಾ ಅಕಾಡೆಮಿ ಕರಾಚಿ)

ಆ ಕಂದಕವನ್ನು ದಾಟಲು ಅದನ್ನು ರಸ್ತೆಗಳನ್ನಾಗಿ ಮಾಡಲು ಕೆಲವರು ಅದನ್ನು ತುಂಬಿದರು ಮತ್ತು ಉಳಿದ ಭಾಗವನ್ನು ಬುತ್‌ಹಾನ್ ಕಣಿವೆಯ ಚರಂಡಿಯ 'ಭಲ್'ನಿಂದ ತುಂಬಿತು. 'ಭಲ್' ಎಂದರೆ ನದಿಯಿಂದ ಬರುವ ಮಳೆನೀರು ಮಣ್ಣಿನೊಂದಿಗೆ ಶೇಖರಣೆಗೊಂಡು ತುಂಬಿಕೊಳ್ಳುವುದಕ್ಕೆ ಭಲ್ ಎಂದು ಹೇಳಲಾಗುತ್ತದೆ. 6 ನೇ ಶತಮಾನದ ಹಿಜ್ರಿಯ ಪ್ರಸಿದ್ಧ ಮದೀನಾದ ಇತಿಹಾಸಕಾರ ಹಾಫಿಝ್ ಇಬ್ನ್ ನಜ್ಜರ್ ಬರೆಯುತ್ತಾರೆ: ಕಂದಕಕ್ಕೆ ಸಂಬಂಧಿಸಿದಂತೆ, ಅದು ನಮ್ಮ ಯುಗದಲ್ಲಿ ಇನ್ನೂ ಅಸ್ತಿತ್ವದಲ್ಲಿದೆ. ಆದರೆ, ಅದು ಚರಂಡಿಯ ಸ್ವರೂಪ ಪಡೆದುಕೊಂಡಿದೆ. ಇದರ ಗೋಡೆ ಹಲವೆಡೆ ಕುಸಿದಿದ್ದು, ಅದರೊಳಗೆ ಅಪಾರ ಪ್ರಮಾಣದ ತಾಳೆ ಮರಗಳು ಬೆಳೆದಿವೆ. 9 ನೇ ಶತಮಾನದ ಹಿಜ್ರಿಯ ಲೇಖಕರು ಇಂದು ಈ ಕಂದಕದಲ್ಲಿ ಏನೂ ಉಳಿದಿಲ್ಲ ಎಂದು ಬರೆಯುತ್ತಾರೆ. ಅದು ಆರು ನೂರು ವರ್ಷಗಳ ಕಾಲ ಉಳಿದಿತ್ತು. 9 ನೇ ಶತಮಾನದಲ್ಲಿ ಬುತ್‌ಹಾನ್ ಕಣಿವೆಯ ಭಾಗವಾಗಿರುವ ಮತ್ತು ಅದರ ಮೂಲಕ ಹರಿಯುವ ಸ್ಟ್ರೀಮ್‌ನಿಂದ ಅದರ ಸ್ಥಳವು ತಿಳಿದುಬಂದಿರುವುದನ್ನು ಹೊರತುಪಡಿಸಿ ಯಾವುದೇ ಕುರುಹು ಇಲ್ಲ ಎಂದು ಅವರು ಹೇಳುತ್ತಾರೆ.
(ಜುಸ್ತುಜೂ ಎ ಮದೀನಾ, ಪುಟ-405, ಓರಿಯಂಟಲ್ ಪಬ್ಲಿಕೇಷನ್ಸ್ ಪಾಕಿಸ್ತಾನ)

ಮದೀನಾದಲ್ಲಿ ಈ ದಿನಗಳು ಭಯ ಮತ್ತು ಆತಂಕದಿಂದ ತುಂಬಿದ್ದವು, ಕಪಟವಿಶ್ವಾಸಿಗಳು ನೆಪಗಳನ್ನು ಹೇಳುತ್ತಾ ತಮ್ಮ ತಮ್ಮ ಮನೆಗಳಿಗೆ ಮತ್ತು ಶಿಬಿರಗಳಿಗೆ ಹೋಗಲಾರಂಭಿಸಿದರು, ಆದರೆ ಸಹಾಬಿಗಳ ಸಾಮಾನ್ಯ ಉತ್ಸಾಹವು ಗಮನಿಸಬಹುದಾಗಿತ್ತು. ಮಕ್ಕಳು ಮತ್ತು ಮಹಿಳೆಯರು ಸಹ ಅವರನ್ನು ಬೆಂಬಲಿಸಲು ಮತ್ತು ಪ್ರೋತ್ಸಾಹಿಸಲು ಅವರ ಪರವಾಗಿ ನಿಂತರು. ಹಝ್ರತ್ ಪೈಗಂಬರ್(ಸ.ಅ) ರ ಪವಿತ್ರ ಪತ್ನಿಯರು ಸಹ ಈ ಅಪಾಯದ ಸಮಯದಲ್ಲಿ ದೃಢಸಂಕಲ್ಪ ಮತ್ತು ಧೈರ್ಯದಿಂದ ಹಝ್ರತ್ ಪೈಗಂಬರ್(ಸ.ಅ) ರೊಂದಿಗೆ ನಿಂತಿರುವುದು ಕಂಡುಬರುತ್ತಿತ್ತು. ಕಂದಕವನ್ನು ಮದೀನದ ಹೊರಗೆ ಅಗೆಯಲಾಗಿದ್ದರಿಂದ ಮತ್ತು ಹಝ್ರತ್ ಪೈಗಂಬರ್(ಸ) ಇಲ್ಲಿಯೇ ಹೆಚ್ಚಿನ ಸಮಯ ಇರುತ್ತಿದ್ದರು ಮತ್ತು ಮದೀನಾದ ಮಹಿಳೆಯರು ಮತ್ತು ಮಕ್ಕಳನ್ನು ಮದೀನಾದ ಕೆಲವು ದೃಢವಾದ ಕೋಟೆಗಳಿಗೆ ವರ್ಗಾಯಿಸಲಾಯಿತು, ಆದ್ದರಿಂದ ಕೆಲವೊಮ್ಮೆ ಹಝ್ರತ್ ಆಯಿಷಾ(ರ) ಹಝ್ರತ್ ಪೈಗಂಬರ್(ಸ)ರ ಬಳಿ ಭೇಟಿ ನೀಡಿ ಕೆಲವು ದಿನಗಳವರೆಗೆ ಉಳಿಯುತ್ತಿದ್ದರು. ತದನಂತರ ಹಝ್ರತ್ ಉಮ್ಮೆಸಲಮಾ(ರ) ಕೆಲವು ದಿನಗಳ ಕಾಲ ಇದ್ದರು. ನಂತರ ಹಝ್ರತ್ ಝೈನಬ್(ರ) ಕೆಲವು ದಿನಗಳ ಕಾಲ ಉಳಿದುಕೊಂಡರು ಮತ್ತು ಉಳಿದ ಎಲ್ಲಾ ಪರಿಶುದ್ಧ ಪತ್ನಿಯರು ಬನೂ ಹಾರಿಸಾರ ದೃಢವಾದ ಕೋಟೆಯಲ್ಲಿದ್ದರು ಮತ್ತು ಕೆಲವರು ಪರಿಶುದ್ಧ ಪತ್ನಿಯರು ಬನೂಝುರೈಕ್‌ನ ಕೋಟೆ ನಸ್ರ್‌ನಲ್ಲಿದ್ದರು ಮತ್ತು ಇನ್ನು ಕೆಲವು ಪರಿಶುದ್ಧ ಪತ್ನಿಯರು 'ಫಾರಿ' ನಲ್ಲಿದ್ದರು ಎಂದು ಹೇಳಲಾಗುತ್ತದೆ. ಇವು ವಿಭಿನ್ನ ವರದಿಗಳಾಗಿವೆ. 'ಫಾರಿ' ಎಂಬುದು ಮದೀನಾದಲ್ಲಿರುವ ಹಝ್ರತ್ ಹಸ್ಸಾನ್ ಬಿನ್ ಸಾಬಿತ್(ರ) ಅವರ ಕೋಟೆಯಾಗಿತ್ತು. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-367, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಫರ್ಹಾಂಗ್ ಸೀರತ್, ಪುಟ-223, ಝೋವರ್ ಅಕಾಡೆಮಿ ಕರಾಚಿ)

ಕಂದಕವನ್ನು ಅಗೆಯುವ ಸಮಯದಲ್ಲಿ ಕೆಲವು ಪವಾಡಗಳು ಸಂಭವಿಸಿದವು. ಅವುಗಳಲ್ಲಿ, ಅಗೆಯುವ ಸಮಯದಲ್ಲಿ ಕಲ್ಲುಬಂಡೆ ಒಡೆಯದ ಘಟನೆಯನ್ನು ಸಹ ವಿವರಿಸಲಾಗಿದೆ. ಒಂದು ವರದಿ ಹೀಗಿದೆ: ಕಂದಕವನ್ನು ಅಗೆಯುವ ಸಮಯದಲ್ಲಿ ಒಂದು ಗಟ್ಟಿಯಾದ ಮತ್ತು ಕಲ್ಲಿನ ಸ್ಥಳವು ಬಂದಿತು ಮತ್ತು ಸಹಾಬೀಯರು ಕಷ್ಟಪಟ್ಟು ಈ ಜಾಗವನ್ನು ಅಗೆದರು ಇದು ಅವರಿಂದ ಸಾಧ್ಯವಾಗಲಿಲ್ಲ. ಅಂತಿಮವಾಗಿ, ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಇದರ ಬಗ್ಗೆ ತಿಳಿಸುತ್ತಾರೆ. ಅದಕ್ಕೆ ಹಝ್ರತ್ ಪೈಗಂಬರ್(ಸ)ರು ಒಂದು ಗುದ್ದಲಿಯನ್ನು ತೆಗೆದುಕೊಂಡು ಆ ಸ್ಥಳಕ್ಕೆ ಹೊಡೆದರು ಆಗ ಆ ಕಲ್ಲಿನ ಭೂಮಿಯು ಮರಳಿನಂತೆ ಆಯಿತು. ಒಂದು ವರದಿಯಲ್ಲಿ ಹೀಗಿದೆ: ಹಝ್ರತ್ ಪೈಗಂಬರ್(ಸ) ಸ್ವಲ್ಪ ನೀರನ್ನು ತರಿಸಿ ಅದರಲ್ಲಿ ತನ್ನ ಲಾಲಾರಸವನ್ನು ಹಾಕಿ ಅಲ್ಲಾಹನೊಡನೆ ಪ್ರಾರ್ಥಿಸಿ ಆ ನೀರನ್ನು ಆ ಬಂಡೆಕಲ್ಲಿನ ಮೇಲೆ ಚಿಮುಕಿಸಿದರು. ಆ ಸಮಯದಲ್ಲಿ ಅಲ್ಲಿದ್ದ ಕೆಲವು ಸಹಾಬಿಯರು ಹೇಳುತ್ತಾರೆ, ಅಲ್ಲಾಹನ ಆಣೆ!! ಈ ನೀರು ಬಿದ್ದ ತಕ್ಷಣ ನೆಲವು ಮೃದುವಾಯಿತು ಮತ್ತು ಮರಳಿನಂತಾಯಿತು. (ಸಿರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-420, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್)

ಈ ಘಟನೆಯು ಅರಸುತನಗಳ ಸುವಾರ್ತೆಯನ್ನು ನೀಡಿದ ಎರಡನೆಯ ಘಟನೆಯಾಗಿದೆ. ಆ ಎರಡನೇ ಘಟನೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ. ಮೊದಲನೆಯ ಘಟನೆಯು ನೀರನ್ನು ಚಿಮುಕಿಸುವುದು ಮತ್ತು ಭವಿಷ್ಯದಲ್ಲಿ ಅರಸುತನಗಳ ಸುವಾರ್ತೆಯನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ನೀಡಲಾಯಿತು. ಇದರ ಬಗ್ಗೆ ಮತ್ತೊಂದು ಘಟನೆ ಹೀಗೆ ಬರೆಯಲಾಗಿದೆ: ಹಝ್ರತ್ ಸಲ್ಮಾನ್ ಫಾರಸಿ(ರ) ಅವರಿಂದ ಒಂದು ಬಂಡೆಕಲ್ಲು ಹೊಡೆಯಲು ಸಾಧ್ಯವಾಗದಿದ್ದಾಗ ಹಝ್ರತ್ ಪೈಗಂಬರ್(ಸ) ಅವರು ಹಝ್ರತ್ ಸಲ್ಮಾ(ರ) ಅವರಿಂದ ಗುದ್ದಲಿಯನ್ನು ತೆಗೆದುಕೊಂಡು ಒಂದೇಟು ಆ ಕಲ್ಲಿನ ಮೇಲೆ ಹೊಡೆದಾಗ ಒಂದು ಮಿಂಚು ಕಾಣಿಸಿಕೊಂಡಿತು. ಅದನ್ನು ಕಂಡು ಹಝ್ರತ್ ಪೈಗಂಬರ್(ಸ) ಅಲ್ಲಾಹು ಅಕ್ಬರ್! ಎಂದು ಹೇಳಿದರು ಅದಕ್ಕೆ ಅವರ ಅಕ್ಕಪಕ್ಕದಲ್ಲಿದ್ದ ಸಹಾಬಿಯರು ಸಹ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅದರ ಒಂದು ಭಾಗವು ಮುರಿದುಹೋಯಿತು. ನಂತರ ಹಝ್ರತ್ ಪೈಗಂಬರ್(ಸ) ಎರಡನೇ ಬಾರಿಗೆ ಹೊಡೆದರು ಅದರಿಂದ ಮತ್ತೆ ಒಂದು ಮಿಂಚು ಕಾಣಿಸಿಕೊಂಡಿತು. ಹಝ್ರತ್ ಪೈಗಂಬರ್(ಸ)ರು ಅಲ್ಲಾಹು ಅಕ್ಬರ್! ಎಂದು ಹೇಳಿದರು. ಅದರಿಂದ ಆ ಬಂಡೆಯ ಮತ್ತೊಂದು ಭಾಗವು ಮುರಿದುಹೋಯಿತು. ಮತ್ತೆ ಹಝ್ರತ್ ಪೈಗಂಬರ್(ಸ) ಮೂರನೇ ಬಾರಿಗೆ ಹೊಡೆದಾಗ ಉಳಿದ ಬಂಡೆಯೂ ಒಡೆದು ಮತ್ತೆ ಮಿಂಚು ಹೊರಬಂದಿತು. ಆಗ ಹಝ್ರತ್ ಪೈಗಂಬರ್(ಸ)ರು ಅಲ್ಲಾಹು ಅಕ್ಬರ್ ಎಂದು ಹೇಳಿದರು ಮತ್ತು ಸಹಾಬೀಯರು ಸಹ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅವರ ಪಕ್ಕದಲ್ಲಿ ನಿಂತಿದ್ದ ಹಝ್ರತ್ ಸಲ್ಮಾನ್ ಫಾರ್ಸಿ(ರ) ಹೇಳಿದರು: ಯಾ ರಸೂಲಲ್ಲಾಹ್(ಸ)!! ನೀವು ಗುದ್ದಲಿಯಿಂದ ಹೊಡೆಯುತ್ತಿದ್ದಾಗ ಆ ಬಂಡೆಯಿಂದ ಬೆಳಕು ಹೊರಬಂದಿತು ಮತ್ತು ನೀವು(ಸ) ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಸಲ್ಮಾನ್! ನೀವೂ ಕೂಡ ಬೆಳಕನ್ನು ನೋಡಿದ್ದೀರಾ? ಅದಕ್ಕೆ ಅವರು ಹೌದು, ಯಾ ರಸೂಲುಲ್ಲಾಹ್(ಸ)! ನಾನೂ ನೋಡಿದೆ ಎಂದು ಹೇಳಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, "ಮೊದಲ ಬಾರಿಗೆ ಬೆಳಕು ಹೊರಬಂದಾಗ, ನನಗೆ ಹಿರಾ ಮತ್ತು ಕಸ್ರಾದ ಅರಮನೆಗಳನ್ನು ತೋರಿಸಲಾಯಿತು, ಮತ್ತು ಜಿಬ್ರೀಲ್ ನನಗೆ ಹೇಳಿದರು: ನಿಮ್ಮ ಉಮ್ಮತ್ತಿನವರು ಅವುಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ. ಎರಡನೇ ಬಾರಿಯ ಬೆಳಕಿನಲ್ಲಿ ರೋಮ್ ದೇಶದ ಕೆಂಪು ಅರಮನೆಗಳನ್ನು ನನಗೆ ತೋರಿಸಲಾಯಿತು ಮತ್ತು ನಿಮ್ಮ ಉಮ್ಮತ್ತಿನವರು ಅವುಗಳನ್ನು ಸ್ವಾಧಿನಪಡಿಸಿಕೊಳ್ಳುತ್ತಾರೆ ಎಂದು ಜಿಬ್ರೀಲ್

ನನಗೆ ತಿಳಿಸಿದರು ಮತ್ತು ಮೂರನೇ ಬಾರಿ ಬೆಳಕು ಹೊರಬಂದಾಗ, ನನಗೆ ಸನ್ಆದ ಅರಮನೆಗಳನ್ನು ತೋರಿಸಲಾಯಿತು. ಮತ್ತು ಜಬ್ರೀಲ್ ನನಗೆ ಹೇಳಿದರು: ನಿಮ್ಮ ಉಮ್ಮತ್ತಿನವರು ಅವುಗಳನ್ನು ಅಧೀನಪಡಿಸಿಕೊಳ್ಳುತ್ತಾರೆ. ಆದ್ದರಿಂದ ಇದು ನಿಮಗೆ ಸುವಾರ್ತೆಯಾಗಿದೆ. ಅದಕ್ಕೆ ಎಲ್ಲರೂ ಹೇಳಿದರು, ಅಲ್ಹಮ್ದುಲಿಲ್ಲಾಹ್! ನಿಜವಾದ ವಾಗ್ದಾನವಾಗಿದೆ. ಸರ್ವಶಕ್ತನಾದ ಅಲ್ಲಾಹನು ನಮಗೆ ಕಷ್ಟದ ನಂತರ ಸಹಾಯ ಮಾಡುವ ಭರವಸೆ ನೀಡಿದ್ದಾನೆ ಮತ್ತು ರಸುಲುಲ್ಲಾ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಪರ್ಷಿಯಾದ ಅರಮನೆಗಳ ಚಿಹ್ನೆಗಳನ್ನು ಸಲ್ಮಾನ್(ರ) ಅವರಿಗೆ ವಿವರಿಸಲು ಪ್ರಾರಂಭಿಸಿದಾಗ ಸಲ್ಮಾನ್(ರ) ಹೇಳಿದರು, "ಯಾ ರಸೂಲಲ್ಲಾಹ್(ಸ)!! ನೀವು(ಸ) ಸತ್ಯವನ್ನು ಹೇಳಿರುವಿರಿ, ಇದು ಅದರ ಸಂಕೇತಗಳಾಗಿವೆ. ಅಂದರೆ: ಹಝ್ರತ್ ಪೈಗಂಬರ್(ಸ) ಅವರು ವಿವರಿಸಿದ ಚಿಹ್ನೆಗಳಂತೆಯೇ ಇದೆ ಎಂದು ಹಝ್ರತ್ ಸಲ್ಮಾನ್(ರ) ದೃಢೀಕರಿಸಿದರು. ಮತ್ತೆ ಅವರು ಹೇಳಿದರು, "ನೀವು ಅಲ್ಲಾಹನ ಸಂದೇಶವಾಹಕರು ಎಂದು ನಾನು ಸಾಕ್ಷಿ ಹೇಳುತ್ತೇನೆ."

ಮತ್ತೆ ಹಝ್ರತ್ ಪೈಗಂಬರ್(ಸ) ಹೇಳಿದರು: ಓ ಸಲ್ಮಾನ್! ಸರ್ವಶಕ್ತನಾದ ಅಲ್ಲಾಹನು ನನ್ನ ಬಳಿಕ ಈ ವಿಜಯಗಳನ್ನು ನೀಡುವನು. ಸಿರಿಯಾವನ್ನು ಸ್ವಾಧಿನಪಡಿಸಿಕೊಳ್ಳಲಾಗುವುದು ಮತ್ತು ಹರ್ಕ್ಯುಲಸ್ ತನ್ನ ಸಾಮ್ರಾಜ್ಯದ ಅಂತ್ಯಕ್ಕೆ ಓಡಿಹೋಗುತ್ತಾನೆ ಮತ್ತು ನೀವು ಸಿರಿಯಾವನ್ನು ವಶಪಡಿಸಿಕೊಳ್ಳುತ್ತೀರಿ. ಯಾರೂ ನಿಮ್ಮೊಂದಿಗೆ ಹೋರಾಡುವುದಿಲ್ಲ ಅಥವಾ ವಿರೋಧಿಸುವುದಿಲ್ಲ ಮತ್ತು ಈ ಪೂರ್ವವನ್ನು ವಶಪಡಿಸಿಕೊಳ್ಳಲಾಗುತ್ತದೆ ಮತ್ತು ಕಸ್ರವನ್ನು ವಧಿಸಲಾಗುತ್ತದೆ. ಅದರ ನಂತರ ಯಾವ ಕಸ್ರಾವೂ ಇರುವುದಿಲ್ಲ. ಮದೀನದ ಕಪಟವಿಶ್ವಾಸಿಗಳು ಈ ವಾಗ್ದಾನಗಳನ್ನು ಆಲಿಸಿ ಮುಸ್ಲಿಮರನ್ನು ಪರಿಹಾಸ ಮಾಡುತ್ತಿದ್ದರು. ಆ ಕಷ್ಟದ ಸಮಯದಲ್ಲಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಮುಸ್ಲಿಮರ ಮುಂಬರುವ ವಿಜಯಗಳು ಮತ್ತು ಲಭಿಸಲಿರುವ ವಿಶಾಲತೆಗಳ ದೃಶ್ಯಗಳನ್ನು ತೋರಿಸಿ ಸಹಾಬಿಯರಿಗೆ ಪ್ರತೀಕ್ಷೆ ಮತ್ತು ಉತ್ಸಾಹದ ಸ್ಪೂರ್ತಿಯನ್ನು ಉಂಟುಮಾಡಿದನು. ಮದೀನದ ಕಪಟವಿಶ್ವಾಸಿಗಳು ಈ ವಾಗ್ದಾನಗಳನ್ನು ಆಲಿಸಿ ಮುಸ್ಲಿಮರನ್ನು ಪರಿಹಾಸ ಮಾಡುತ್ತಾ ಹೀಗೆ ಹೇಳಿದರು: ಮನೆಯಿಂದ ಹೊರಗೆ ಹೆಜ್ಜೆ ಹಾಕಲು ಶಕ್ತಿಯಿಲ್ಲ. ಇಂತಹ ಸ್ಥಿತಿಯಲ್ಲಿ ಸಿರಿಯ ಮತ್ತು ಇರಾನಿನ ಸಾಮ್ರಾಜ್ಯದ ಕನಸು ಕಾಣುತ್ತಾ ಇದ್ದಾರೆ. ಈ ಸಂದರ್ಭದಲ್ಲಿ ಸರ್ವಶಕ್ತನಾದ ಅಲ್ಲಾಹನು ಈ ವಚನದಲ್ಲಿ ಕಪಟಿಗಳ ಸ್ಥಿತಿಯನ್ನು ವ್ಯಕ್ತಪಡಿಸಿದ್ದಾನೆ. **ವಇಝ್ ಯಖೂಲುಲ್‌ಮುನಾಫಿಖೂನ ವಲ್ಲಝೀನ ಫೀ ಖುಲೂಬಿಹಿಮ್ ಮರಝುಮ್ಮಾ ವಅದನಲ್ಲಾಹು ವ ರಸೂಲಿಹು ಇಲ್ಲಾ ಗ಼ುರೂರಾ–** (ಅಲ್‌ಅಹ್‌ಝಾಬ್:13) ಅಂದರೆ: ಆಗ ಕಪಟ ವಿಶ್ವಾಸಿಗಳು ಮತ್ತು ತಮ್ಮ ಹೃದಯಗಳಲ್ಲಿ ರೋಗವಿರುವವರು, 'ಅಲ್ಲಾಹನು ಮತ್ತು ಅವನ ಸಂದೇಶವಾಹಕ ನಮಗೆ ಸುಳ್ಳು ವಾಗ್ದಾನವನ್ನು ಮಾತ್ರವೇ ನೀಡಿದರು' ಎಂದು ಹೇಳಿದರು. ಆದರೆ ನೋಡುಗರು ಕೆಲವೇ ವರ್ಷಗಳಲ್ಲಿ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರ ಖಿಲಾಫತ್ ಕಾಲಾವಧಿಯಲ್ಲಿ, ಈ ಎಲ್ಲಾ ನಗರಗಳು ಮತ್ತು ಅರಮನೆಗಳನ್ನು ಸ್ವಾಧಿನಪಡಿಸಿಕೊಂಡರು ಮತ್ತು ಈ ಅಸಹಾಯಕ ಮತ್ತು ಹಸಿವಿನಿಂದ ಬಳಲುತ್ತಿರುವ ಭಕ್ತರು ಈ ಅರಮನೆಗಳ ವಾರಸುದಾರರಾದರು. ಈ ಎಲ್ಲಾ ವಿಜಯಗಳನ್ನು ನಾನು ನೋಡಿದ್ದೇನೆ ಎಂದು ಹಝ್ರತ್ ಸಲ್ಮಾನ್ ಫಾರ್ಸಿ(ರ) ಹೇಳುತ್ತಾರೆ. (ಅಲ್–ಇಕ್ತಿಫಾ, ಸಂಪುಟ–1, ಪುಟ–422) (ಸಬ್ಲುಲ್ ಹುದಾ ವಲ್–ರಶಾದ್, ಸಂಪುಟ–4, ಪುಟ–368 ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ)ರು ಕಲ್ಲು ಒಡೆಯುವ ಪ್ರಸಂಗಗಳನ್ನೂ ಮತ್ತು ಅಲ್ಲಿ ಸೃಷ್ಟಿಯಾದ ಪವಾಡಗಳನ್ನು ಅವರದೇ ಶೈಲಿಯಲ್ಲಿ ವಿವರಿಸಿದ್ದಾರೆ, ಅವರು ಬರೆಯುತ್ತಾರೆ: "ಕಷ್ಟ ಮತ್ತು ಕಠಿಣವಾದ ಪರಿಸ್ಥಿತಿಯಲ್ಲಿ ಕಂದಕವನ್ನು ಅಗೆಯುತ್ತಾ ಇರುವಾಗ ಒಂದು ಬಂಡೆಕಲ್ಲು ಸಿಕ್ಕಿತು. ಅದು ಯಾವುದೇ ರೀತಿಯಲ್ಲಿ ತುಂಡಾಗುತ್ತಿರಲಿಲ್ಲ. ಸಹಾಬಗಳ ಪರಿಸ್ಥಿತಿ ಹೇಗಿತ್ತು ಎಂದರೆ ಅವರು ಸತತವಾಗಿ ಮೂರು ದಿನದಿಂದ ಊಟಮಾಡದೆ ಹಸಿವಿನಿಂದ ನರಳುವಂತಾಗಿತ್ತು. ಕೊನೆಗೆ ಬೇಸರಗೊಂಡು ಕೊನೆಗೆ ಏನೂ ಮಾಡಲು ಸಾಧ್ಯವಾಗದೇ ಬಂದಾಗ ಸಹಾಬಿಯರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಒಂದು ಬಂಡೆಗಲ್ಲು ತುಂಡಾಗುತ್ತಿಲ್ಲವೆಂದು ತಿಳಿಸಿದರು. ಆ ವೇಳೆ ಅವರೂ ಕೂಡ ಹಸಿವಿನಿಂದ ಹೊಟ್ಟೆಗೆ ಕಲ್ಲು ಕಟ್ಟಿಕೊಂಡ ಸ್ಥಿತಿಯಲ್ಲಿದ್ದರು, ಹಝ್ರತ್ ಪೈಗಂಬರ್(ಸ) ಕೂಡಲೇ ಅಲ್ಲಿಗೆ ಹೋಗಿ ಒಂದು ಹಾರೆಯನ್ನು ತೆಗೆದು ಅಲ್ಲಾಹನ ನಾಮವನ್ನು ಉಚ್ಚರಿಸಿ ಕಲ್ಲಿನ ಮೇಲೆ ಹೊಡೆದರು. ಲೋಹ ತಟ್ಟಿದಾಗ ಬಂಡೆಕಲ್ಲಿನಿಂದ ಒಂದು ಚಿಂಗಾರಿ ಚಿಮ್ಮಿತು. ಆಗ ಹಝ್ರತ್ ಪೈಗಂಬರ್(ಸ) ಜೋರಾಗಿ ಅಲ್ಲಾಹು ಅಕ್ಬರ್ ಎಂದು ಉದ್ಗರಿಸಿ ಹೀಗೆ ಹೇಳಿದರು: ನನಗೆ ಸಿರಿಯದ ಸಾಮ್ರಾಜ್ಯದ ಕೀಲಿಗೈಗಳನ್ನು ನೀಡಲಾಗಿದೆ. ಅಲ್ಲಾಹನಾಣೆ, ಈಗ ಸಿರಿಯದ ಕೆಂಪು ಅರಮನೆಗಳು ನನ್ನ ಕಣ್ಣುಗಳ ಮುಂದಿವೆ. ಈ ಹೊಡೆತದಿಂದ ಬಂಡೆಕಲ್ಲಿನ ಸ್ವಲ್ಪ ಭಾಗ ತುಂಡಾಯಿತು. ಹಝ್ರತ್ ಪೈಗಂಬರ್(ಸ) ಮತ್ತೊಮ್ಮೆ ಅಲ್ಲಾಹನ ಹೆಸರನ್ನು ಉಚ್ಚರಿಸಿ ಹಾರೆಯಿಂದ ಹೊಡೆದರು. ಆಗ ಮತ್ತೊಂದು ಕಿಡಿ ಚಿಮ್ಮಿತು. ಆಗ ಹಝ್ರತ್ ಪೈಗಂಬರ್(ಸ) ಪುನಃ ಅಲ್ಲಾಹು ಅಕ್ಬರ್ ಎಂದು ಉದ್ಗರಿಸಿ ಹೀಗೆ ಹೇಳಿದರು: ಈ ಬಾರಿ ನನಗೆ ಇರಾನಿನ ಕೀಲಿಗೈಗಳನ್ನು ನೀಡಲಾಗಿದೆ ಮತ್ತು ಮದಾಯಿನಿನ ಶ್ವೇತ ಮಹಲುಗಳನ್ನು ನಾನು ನೋಡುತ್ತಿದ್ದೇನೆ. ಈ ಬಾರಿ ಬಂಡೆಕಲ್ಲು ಮತ್ತೂ ಸ್ವಲ್ಪ ತುಂಡಾಯಿತು. ಮೂರನೇ ಬಾರಿ ಹಝ್ರತ್ ಪೈಗಂಬರ್(ಸ) ಹಾರೆಯಿಂದ ಹೊಡೆದರು. ಆಗಲೂ ಒಂದು ಕಿಡಿ ಚಿಮ್ಮಿತು. ಹಝ್ರತ್ ಪೈಗಂಬರ್(ಸ) ಪುನಃ ಅಲ್ಲಾಹು ಅಕ್ಬರ್ ಎಂದು ಉದ್ಗರಿಸಿ ಹೀಗೆ ಹೇಳಿದರು: ಈಗ ನನಗೆ ಯಮನಿನ ಕೀಲಿಗೈಗಳನ್ನು ನೀಡಲಾಗಿದೆ. ಅಲ್ಲಾಹನಾಣೆ ಸನ್‌ಆದ ಬಾಗಿಲುಗಳು ನನಗೆ ತೋರಿಸಲಾಗುತ್ತಿವೆ. ಈ ಬಾರಿ ಬಂಡೆಕಲ್ಲು ಸಂಪೂರ್ಣವಾಗಿ ತುಂಡಾಗಿ ಬಿದ್ದುಹೋಯಿತು. ಹಝ್ರತ್ ಪೈಗಂಬರ್(ಸ) ಕಂಡ ಈ ದೃಶ್ಯ ದಿವ್ಯದರ್ಶನವಾಗಿತ್ತು. ಆ ಕಷ್ಟದ ಸಮಯದಲ್ಲಿ ಅಲ್ಲಾಹನು ಹಝ್ರತ್ ಪೈಗಂಬರ್(ಸ)ರಿಗೆ ಮುಸ್ಲಿಮರ ಮುಂಬರುವ ವಿಜಯಗಳು ಮತ್ತು ಲಭಿಸಲಿರುವ ವಿಶಾಲತೆಗಳ ದೃಶ್ಯಗಳನ್ನು ತೋರಿಸಿ ಸಹಾಬಿಯರಿಗೆ ಪ್ರತೀಕ್ಷೆ ಮತ್ತು ಉತ್ಸಾಹದ ಸ್ಪೂರ್ತಿಯನ್ನು ಉಂಟುಮಾಡಿದನು. ಮದೀನದ ಕಪಟವಿಶ್ವಾಸಿಗಳು ಈ ವಾಗ್ದಾನಗಳನ್ನು ಆಲಿಸಿ ಮುಸ್ಲಿಮರನ್ನು ಪರಿಹಾಸ ಮಾಡುತ್ತಾ ಹೀಗೆ ಹೇಳಿದರು: ಮನೆಯಿಂದ ಹೊರಗೆ ಹೆಜ್ಜೆ ಹಾಕಲು ಶಕ್ತಿಯಿಲ್ಲ. ಇಂತಹ ಸ್ಥಿತಿಯಲ್ಲಿ ಸಿರಿಯ ಮತ್ತು ಇರಾನಿನ ಸಾಮ್ರಾಜ್ಯದ ಕನಸು ಕಾಣುತ್ತಾ ಇದ್ದಾರೆ. ಆದರೆ ಅಲ್ಲಾಹನ ವಾಗ್ದಾನಗಳು ಅವುಗಳು ಈಡೇರಬೇಕಾದ ಸಮಯಗಳಲ್ಲಿ, ಎಂದರೆ ಕೆಲವು ಹಝ್ರತ್ ಪೈಗಂಬರ್(ಸ)ರ ಜೀವನದ ಕೊನೆಯ ಕಾಲದಲ್ಲಿ ಮತ್ತು ಹೆಚ್ಚಿನದು ಹಝ್ರತ್ ಪೈಗಂಬರ್(ಸ)ರ ಖ಼ಲೀಫರ ಕಾಲದಲ್ಲಿ ಈಡೇರಿ ಮುಸ್ಲಿಮರ ವಿಶ್ವಾಸವರ್ಧನೆ ಮತ್ತು ಉಪಕಾರ ಸ್ಮರಣೆಗೆ ಕಾರಣವಾಯಿತು.
(ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಸಾಹಿಬ್ಜಾದಾ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂ.ಎ(ರ), ಪುಟ–577,578)

ಹಝ್ರತ್ ಮುಸ್ಲೆಹ್ ಮೌಊದ್(ರ) ಕೂಡ ಇದರ ಬಗ್ಗೆ ಬರೆದಿದ್ದಾರೆ: ಅವರು(ರ) ಹೇಳುತ್ತಾರೆ: "ಕಂದಕ ಅಗೆಯುವಾಗ ಜನ ಒಡೆಯಲಾರದ ಕಲ್ಲು ನೆಲದಿಂದ ಹೊರಬಂದಿತು. ಈ ಬಗ್ಗೆ ಸಹಾಬೀಯರು ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದರು, ಆದ್ದರಿಂದ ಅವರು(ಸ) ಸ್ವತಃ ಅಲ್ಲಿಗೆ ಬಂದರು. ಕೈಯಲ್ಲಿ ಗುದ್ದಲಿ ಹಿಡಿದು ಕಲ್ಲಿಗೆ ಬಲವಾಗಿ ಹೊಡೆದರು. ಗುದ್ದಲಿ ಬಿದ್ದ ಕಾರಣ ಆ ಕಲ್ಲಿನಿಂದ ಬೆಳಕು ಹೊರಬಂದಿತು. ಅದಕ್ಕೆ ಹಝ್ರತ್ ಪೈಗಂಬರ್(ಸ) ಅವರು ಅಲ್ಲಾಹು ಅಕ್ಬರ್ ಎಂದು ಹೇಳಿದರು. ಮತ್ತೊಮ್ಮೆ ಅವರು(ಸ) ಗುದ್ದಲಿಯನ್ನು ಹೊಡೆದರು ಮತ್ತೊಮ್ಮೆ ಬೆಳಕು ಹೊರಬಂದಿತು. ಆಗ ಅವರು(ಸ) ಅಲ್ಲಾಹು ಅಕ್ಬರ್ ಎಂದು ಹೇಳಿದರು. ನಂತರ ಅವರು(ಸ) ಮೂರನೇ ಬಾರಿಗೆ ಗುದ್ದಲಿಯನ್ನು ಹೊಡೆದರು ಮತ್ತೆ ಆ ಕಲ್ಲಿನಿಂದ ಬೆಳಕು ಹೊರಬಂದು ಕಲ್ಲು ಒಡೆಯಿತು. ಈ ಸಂದರ್ಭದಲ್ಲಿ ಅವರು(ಸ) ಮತ್ತೊಮ್ಮೆ ಅಲ್ಲಾಹು ಅಕ್ಬರ್ ಎಂದು ಹೇಳಿದರು. ಅದಕ್ಕೆ ಸಹಾಬರು ಅವರನ್ನು ಕೇಳಿದರು. ಯಾ ರಸೂಲಲ್ಲಾಹ್(ಸ)!! ನೀವು ಮೂರು ಬಾರಿ ಅಲ್ಲಾಹು ಅಕ್ಬರ್ ಎಂದು ಏಕೆ ಹೇಳಿದ್ದೀರಿ? ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು, ಕಲ್ಲಿನ ಮೇಲೆ ಗುದ್ದಲಿ ಬಿದ್ದಾಗ ಮೂರು ಬಾರಿ ಬೆಳಕು ಹೊರಹೊಮ್ಮಿತು ಆಗ ಅಲ್ಲಾಹನು ನನಗೆ ಮೂರು ಬಾರಿ ಇಸ್ಲಾಂನ ಭವಿಷ್ಯದ ಅಭಿವೃದ್ಧಿಯ ನಕ್ಷೆಯನ್ನು ತೋರಿಸಿದ್ದಾನೆ. ಮೊದಲ ಬಾರಿಗೆ ನನಗೆ ಸಿರಿಯಾದಲ್ಲಿ ಖೈಸರ್‌ನ ಸಾಮ್ರಾಜ್ಯದ ಅರಮನೆಗಳನ್ನು ತೋರಿಸಲಾಯಿತು ಮತ್ತು ಅದರ ಕೀಲುಗೈಗಳನ್ನು ನನಗೆ ನೀಡಲಾಯಿತು. ಎರಡನೇ ಬೆಳಕಿನಲ್ಲಿ ಮದಾಇನ್‌ನ ಬಿಳಿ ಅರಮನೆಗಳನ್ನು ನನಗೆ ತೋರಿಸಲಾಯಿತು ಮತ್ತು ಪರ್ಷಿಯಾ ಸಾಮ್ರಾಜ್ಯದ ಕೀಲಿಗೈಗಳನ್ನು ನನಗೆ ನೀಡಲಾಯಿತು. ಮೂರನೇ ಬಾರಿಯ ಬೆಳಕಿನಲ್ಲಿ, ಸನ್‌ಆನ ದ್ವಾರಗಳನ್ನು ನನಗೆ ತೋರಿಸಲಾಯಿತು ಮತ್ತು ಯಮನ್ ಸಾಮ್ರಾಜ್ಯದ ಕೀಲಿಗೈಗಳನ್ನು ನನಗೆ ನೀಡಲಾಯಿತು. ಆದ್ದರಿಂದ ನೀವು ದೇವರ ವಾಗ್ದಾನಗಳನ್ನು ನಂಬಿರಿ. ಶತ್ರು ನಿಮಗೆ ಹಾನಿ ಮಾಡಲಾರರು." (ಮುನ್ನುಡಿ ತಫ್ಸೀರ್ ಅಲ್–ಖುರ್‌ಆನ್, ಅನ್ವರುಲ್ ಉಲೂಮ್, ಸಂಪುಟ–20, ಪುಟ–269)

ಆ ದಿನಗಳಲ್ಲಿ ನಡೆದ ಪವಾಡಗಳಲ್ಲಿ, ಆಹಾರದ ಪವಾಡವೂ ಇದೆ, ಇನ್ನು ಅನೇಕ ಆಹಾರದ ಪವಾಡಗಳೂ ಇರಬಹುದು ಆದರೆ

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ರವರು ಆಹಾರವನ್ನು ಬೇಯಿಸಿದರು ಅದನ್ನು ಅನುಗ್ರಹಿಸಲ್ಪಟ್ಟಿತು ಎಂದು ಒಂದು ಘಟನೆಯನ್ನು ವಿವರಿಸಲಾಗಿದೆ.

ಅದರ ವಿವರ ಹೀಗಿದೆ: ಹಝ್ರತ್ ಜಾಬೀರ್(ರ) ಅವರು ಅದೇ ದಿನಗಳಲ್ಲಿ ಒಂದು ದಿನ ಹಝ್ರತ್ ಪೈಗಂಬರ್(ಸ) ಅವರನ್ನು ಹಸಿವಿನ ಕಾರಣದಿಂದ ಹೊಟ್ಟೆಗೆ ಕಲ್ಲು ಕಟ್ಟಿಕೊಂಡಿರುವುದನ್ನು ನೋಡಿದರು ಮತ್ತು ಸಹಾಬಿಗಳು ಮೂರು ದಿನಗಳಿಂದ ಅಲ್ಲಿದ್ದರು. ಯಾವುದೇ ರೀತಿಯ ಆಹಾರದ ರುಚಿ ಕೂಡ ಕಾಣಿರಲಿಲ್ಲ. ತಿನ್ನಲು ಏನೂ ಸಿಗದೆ ಮೂರು ದಿನಗಳಾಗಿದ್ದವು. ಜಾಬಿರ್(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್(ಸ) ಅವರನ್ನು ಮನೆಗೆ ಹೋಗಲು ಅನುಮತಿ ಕೇಳಿದಾಗ ಹಝ್ರತ್ ಪೈಗಂಬರ್(ಸ)ರು ನನಗೆ ಅನುಮತಿ ನೀಡಿದರು. ನಾನು ಮನೆಗೆ ಹೋಗಿ ನನ್ನ ಪತ್ನಿಗೆ ಹಝ಼್ರತ್ ಪೈಗಂಬರ್(ಸ)ರ ಮುಖದಲ್ಲಿ ಹಸಿವಿನ ಕಾರಣದಿಂದ ಉಂಟಾದ ದೌರ್ಬಲ್ಯ ಮತ್ತು ಆಯಾಸದ ಲಕ್ಷಣಗಳನ್ನು ನೋಡಿದ್ದೇನೆ, ಅದನ್ನು ನೋಡಿದ ನಂತರ ನನಗೆ ತಾಳ್ಮೆಯಿಂದಿರಲು ಸಾಧ್ಯವಾಗಲಿಲ್ಲ. ಊಟಕ್ಕಾಗಿ ಏನಾದರೂ ಇದೆಯೇ? ಎಂದು ಕೇಳಿದೆ. ಸ್ವಲ್ಪ ಬಾರ್ಲಿಯ ಹಿಟ್ಟು ಮತ್ತು ಒಂದು ಆಡು ಇದೆ ಎಂದು ಪತ್ನಿ ಹೇಳಿದಳು. ಪತ್ನಿ ಬಾರ್ಲಿಯನ್ನು ರುಬ್ಬಿದಳು ಮತ್ತು ನಾನು ಮಾಂಸವನ್ನು ಮಡಕೆಗೆ ಹಾಕಿದೆನು. ನನ್ನ ಪತ್ನಿ ಹೇಳಿದಳು: ಹಝ಼್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಅವರನ್ನು ಮನೆಗೆ ಬರಲು ಹೇಳುವುದಾಗಿ ತಿಳಿಸಿದರು. ಅವರ ಪತ್ನಿ ಹೇಳಿದರು: ನನ್ನನ್ನು ಅವಮಾನಿಸಬೇಡಿರಿ. ಆಹಾರ ಸ್ವಲ್ಪ ಮಾತ್ರವಿದೆ. ಹಝ಼್ರತ್ ಪೈಗಂಬರ್(ಸ)ರ ಜೊತೆಗೆ ಹೆಚ್ಚು ಜನರು ಬರದಂತೆ ನೋಡಿರಿ. ಅವರು ಮುಂದೆ ಹೇಳುತ್ತಾರೆ: ನಾನು ಮೆಲುದನಿಯಲ್ಲಿ ಹಝ಼್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವು ನಿಮ್ಮ ಸ್ವಲ್ಪ ಸಹಾಬಿಯರ ಜೊತೆಗೆ ನನ್ನ ಮನೆಗೆ ಬಂದು ಊಟ ಮಾಡಿರಿ. ಆಹಾರವೆಷ್ಟಿದೆ ಎಂದು ಹಝ಼್ರತ್ ಪೈಗಂಬರ್(ಸ) ಅವರೊಡನೆ ಕೇಳಿದರು. ಇಂತಿಷ್ಟು ಇದೆ ಎಂದು ಅವರು ಹೇಳಿದರು. ಹಝ಼್ರತ್ ಪೈಗಂಬರ್(ಸ) ಹೇಳಿದರು: ಅದು ಸಾಕು. ನೀವು ಮನೆಗೆ ಹೋಗಿ ನಾನು ಬರುವವರೆಗೆ ಪಾತ್ರೆಯನ್ನು ಕೆಳಗಿರಿಸಬೇಡಿ ಮತ್ತು ರೊಟ್ಟಿಯನ್ನು ಬೇಯಿಸಲು ಪ್ರಾರಂಭಿಸಬೇಡಿ ಎಂದು ನಿಮ್ಮ ಪತ್ನಿಗೆ ಹೇಳಿರಿ ಎಂದು ಹೇಳಿದರು. ಮತ್ತು ಹಝ್ರತ್ ಪೈಗಂಬರ್(ಸ) ಅವರು ಎಲ್ಲರನ್ನು ಉದ್ದೇಶಿಸಿ ಹೇಳಿದರು: ಓ ಕಂದಕದ ಜನರೇ! ಜಾಬಿರ್ ನಿಮಗಾಗಿ ಆಹಾರವನ್ನು ಸಿದ್ಧಪಡಿಸಿದ್ದಾರೆ. ಬನ್ನಿ! ಎಂದು ಹಝ್ರತ್ ಪೈಗಂಬರ್(ಸ)ರು ಜನರ ಮುಂದೆ ನಡೆಯಲು ಪ್ರಾರಂಭಿಸಿದರು ಮತ್ತು ನನಗೆ ಎಷ್ಟು ನಾಚಿಕೆಯಾಯಿತು ಎಂದರೆ ಅದು ಅಲ್ಲಾಹನಿಗೆ ಮಾತ್ರ ತಿಳಿದಿದೆ. ತುಂಬಾ ಜನ ಬರುತ್ತಿದ್ದಾರೆ ಎಂದು ನಾನು ನನ್ನ ಮನದಲ್ಲೇ ಹೇಳಿಕೊಂಡೆ. ಅಲ್ಲಾಹನ ಆಣೆ, ಒಂದು ಸಾ ಬಾರ್ಲಿ ಮತ್ತು ಆಡಿನ ಮರಿಗೆ ಇಷ್ಟೊಂದು ಜನರು ಬರುವುದು ಅವಮಾನಕರವಾಗಿದೆ. ನಾನು ಮನೆಯಲ್ಲಿ ನನ್ನ ಪತ್ನಿಯ ಬಳಿಗೆ ಹೋಗಿ, ಹಝ್ರತ್ ಪೈಗಂಬರ್(ಸ)ರು ತಮ್ಮೊಂದಿಗೆ ಮುಹಾಜಿರೀನರನ್ನು ಮತ್ತು ಅನ್ಸಾರ್‌ಗಳನ್ನು ಕರೆತರುತ್ತಿದ್ದಾರೆ ಎಂದು ಇಡೀ ಸಂಗತಿಯನ್ನು ವಿವರಿಸಿದೆ. ಅದಕ್ಕ ನನ್ನ ಪತ್ನಿ ಹೇಳಿದಳು, ನಾನು ನಿಮಗೆ ಮೊದಲೇ ರಹಸ್ಯವಾಗಿ ಹೇಳಲು ಹೇಳಿದ್ದೆ. ನೀನು ಹೇಳಿದಂತೆಯೇ ನಾನು ಹೇಳಿದ್ದೇನೆ ಎಂದು ಪತಿ ಪತ್ನಿಗೆ ಹೇಳಿದ. ಅದಕ್ಕೆ ಪತ್ನಿ ಹೇಳಿದಳು: ಇತರ ಎಲ್ಲ ಜನರನ್ನು ನೀವು ಅಹ್ವಾನಿಸಿದ್ದೀರಿ ಅಥವಾ ಪೈಗಂಬರ್(ಸ)ರು ಆಹ್ವಾನಿಸಿದ್ದಾರೆ? ಅದಕ್ಕೆ ಅವರು ಹೇಳಿದರು ಹಝ್ರತ್ ಪೈಗಂಬರ್(ಸ) ಅಹ್ವಾನಿಸಿದ್ದಾರೆ. ಈ ಬಗ್ಗೆ ಆ ಪ್ರಾಮಾಣಿಕ ನಿಷ್ಠಾವಂತ ಪತ್ನಿ ಹೇಳಿದಳು ಹಾಗಾದರೆ ಚಿಂತಿಸಬೇಕಾಗಿಲ್ಲ ಅಲ್ಲಾಹ್ ಹಾಗೂ ಅವರ ಸಂದೇಶವಾಹಕರು ಚೆನ್ನಾಗಿ ತಿಳಿದಿದ್ದಾರೆ ಎಂದು ಹೇಳಿದರು. ಈಗ ಚಿಂತೆಯಿಲ್ಲ. ಆ ಸಮಯದಲ್ಲಿ ಈಮಾನ್ ಮತ್ತು ಪ್ರಾಮಾಣಿಕತೆಯಿಂದ ತನ್ನ ಪತಿಗಿಂತ ಹೆಚ್ಚು ವರ್ಧಿಸಿ ಮಹಿಳೆಗೆ ಈ ವಿಶ್ವಾಸವು ಸೇರಿದೆ. ಜಾಬಿರ್ ಹೇಳುತ್ತಾರೆ: ಮತ್ತೆ ಹಝ್ರತ್ ಪೈಗಂಬರ್(ಸ) ನಮ್ಮ ಮನೆಗೆ ಪ್ರವೇಶಿಸಿ ಹೇಳಿದರು: ನಿಮ್ಮಲ್ಲಿ ಹತ್ತು ಮಂದಿ ಪ್ರವೇಶಿಸಿರಿ. ಅದೇನೆಂದರೆ ಬಂದಿದ್ದ ಜನರನ್ನು ಹತ್ತು ಹತ್ತು ಜನರನ್ನು ಗುಂಪುಗಳಾಗಿ ವಿಂಗಡಿಸಿ ಜಾಬಿರ್(ರ) ಅವರ ಪತ್ನಿ ಹಿಟ್ಟು ತೆಗೆದರು, ನಂತರ ಪೈಗಂಬರ್(ಸ) ಅದರೊಳಗೆ ತಮ್ಮ ಲಾಲಾರಸವನ್ನು ಸುರಿದು ಅನುಗ್ರಹಕ್ಕಾಗಿ ಪ್ರಾರ್ಥಿಸಿದರು. ನಂತರ ನಮ್ಮ ಪಾತ್ರೆಯಲ್ಲಿ ಲಾಲಾರಸವನ್ನು ಹಾಕಿ ಅನುಗ್ರಹಕ್ಕಾಗಿ ದುಆ ಮಾಡಿದರು. ನಂತರ ನಮಗೆ ರೊಟ್ಟಿ ಬೇಯಿಸಲು ಮತ್ತು ಸಾರನ್ನು ಹಾಕಲು ಮತ್ತು ಪಾತ್ರೆಯನ್ನು ಮುಚ್ಚಲು ಹೇಳಿದರು. ಮತ್ತೆ ರೊಟ್ಟಿಯನ್ನು ತಂದೂರಿನಿಂದ ತೆಗೆದು ಆ ರೊಟ್ಟಿಗಳನ್ನು ಮುಚ್ಚಲು ಆದೇಶಿಸಿದರು, ಆದ್ದರಿಂದ ನಾವು ಹಾಗೆಯೇ ಮಾಡಿದೆವು. ನಾವು ಸಾರನ್ನು ಹೊರತೆಗೆಯುತ್ತಿದ್ದೆವು ಮತ್ತು ಹುಝೂರ್ ಸಲ್ಲಲ್ಲಾಹು ಅಲೈಹಿವಸಲ್ಲವರು ಆ ಪಾತ್ರಯನ್ನು ಮುಚ್ಚಿತ್ತಿದ್ದರು, ನಂತರ ಅದನ್ನು ತೆರೆದಾಗ ಅದು ಕಡಿಮೆಯಾಗದಿರುವುದನ್ನು ನಾವು ನೋಡಿದ್ದೇವೆ. ಮತ್ತೆ ರೊಟ್ಟಿಯನ್ನು ತಂದೂರಿನಿಂದ ತೆಗೆಯಲಾಗುತ್ತಿತ್ತು ಮತ್ತೆ ಅದನ್ನು ಮುಚ್ಚಲಾಗುತ್ತಿತ್ತು ಆದರೆ ಅದು ಕೂಡ ಕಡಿಮೆಯಾಗದಿರುವುದನ್ನು ನೋಡಿದೆವು. ಹಝ್ರತ್ ಪೈಗಂಬರ್(ಸ) ಅವರು ರೊಟ್ಟಿಯನ್ನು ತುಂಡು ತುಂಡಾಗಿ ಕತ್ತರಿಸಿ ಅದರ ಮೇಲೆ ಮಾಂಸವನ್ನು ಹಾಕುತ್ತಿದ್ದರು. ಮತ್ತು ತಮ್ಮ ಸಹಾಬಿಯರನ್ನು ಹತ್ತಿರ ಕರಿಸಿ ತಿನ್ನಲು ಆದೇಶಿಸುತ್ತಿದ್ದರು. ಒಂದು ಗುಂಪು ಹೊಟ್ಟೆ ತುಂಬ ತಿಂದ ನಂತರ ಹೊರಟು ಹೋಗುತ್ತಿದ್ದರು. ನಂತರ ಮತ್ತೊಂದು ಗುಂಪನ್ನು ಕರೆಸುತ್ತಿದ್ದರು ಹೀಗೆ ಒಂದು ಸಾವಿರ ಜನ ಆ ಆಹಾರವನ್ನು ಸೇವಿಸಿದರು ಮತ್ತು ನಮ್ಮ ಅಡುಗೆ ಪಾತ್ರೆಯು ಮೊದಲಿನಂತೆ ಕಲಕುತ್ತಾ ಇತ್ತು ಮತ್ತು ನಮ್ಮ ಹಿಟ್ಟು ಮೊದಲಿನಂತೆ ಬಿದ್ದಿತ್ತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮ್‌ರು ಹೇಳಿದರು, ಇದನ್ನು ನೀವು ತಿನ್ನಿರಿ ಮತ್ತು ಜನರಿಗೂ ಕಳುಹಿಸಿ ಏಕೆಂದರೆ ಜನರು ತುಂಬಾ ಹಸಿದಿದ್ದಾರೆ. (ಸಬ್ಲುಲ್ ಹುದಾ ವಲ್-ರಶಾದ್, ಸಂಪುಟ-4, ಪುಟ-369, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಲುಗ಼ಾತುಲ್ ಹದೀಸ್, ಸಂಪುಟ-2, ಪುಟ-648)

ಆಹಾರದ ಕುರಿತು ಒಂದು ಅದ್ಭುತ ಘಟನೆ ಕೂಡ ನಡೆದಿತ್ತು. ಹಝ಼್ರತ್ ಮಿರ್ಝ಼ಾ ಬಶೀರ್ ಅಹ್ಮದ್ ಸಾಹಿಬ್(ರ) ಒಂದು ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಆ ಸಂದರ್ಭದಲ್ಲಿ ಹಝ಼್ರತ್ ಪೈಗಂಬರ್(ಸ)ರ ಮುಖದಲ್ಲಿ ಹಸಿವಿನ ಕಾರಣದಿಂದ ಉಂಟಾದ ದೌರ್ಬಲ್ಯ ಮತ್ತು ಆಯಾಸದ ಲಕ್ಷಣಗಳನ್ನು ನಿಷ್ಠಾವಂತ ಸಹಾಬಿಯಾದ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ನೋಡಿದರು ಮತ್ತು ಹಝ಼್ರತ್ ಪೈಗಂಬರ್(ಸ)ರಿಂದ ತನ್ನ ಮನೆಗೆ ಹೋಗಲು ಅನುಮತಿ ಕೇಳಿದರು. ಮನೆಗೆ ಹೋಗಿ ತನ್ನ ಪತ್ನಿಯೊಡನೆ ಊಟಕ್ಕಾಗಿ ಏನಾದರೂ ಇದೆಯೇ? ಎಂದು ಕೇಳಿದರು. ಸ್ವಲ್ಪ ಬಾರ್ಲಿಯ ಹಿಟ್ಟು ಮತ್ತು ಒಂದು ಆಡು ಇದೆ ಎಂದು ಪತ್ನಿ ಹೇಳಿದಳು. ಹಝ಼್ರತ್ ಜಾಬಿರ್(ರ) ಆಡನ್ನು ಕೊಯ್ದರು ಮತ್ತು ಹಿಟ್ಟನ್ನು ನಾದಿದರು ಹಾಗೂ ತನ್ನ ಪತ್ನಿಯೊಡನೆ ಊಟ ತಯಾರಿಸಲು ಹೇಳಿ ಹಝ಼್ರತ್ ಪೈಗಂಬರ್(ಸ)ರ ಸನ್ನಿಧಿಗೆ ಹೋಗಿ ಅವರನ್ನು ಮನೆಗೆ ಬರಲು ಹೇಳುವುದಾಗಿ ತಿಳಿಸಿದರು. ಅವರ ಪತ್ನಿ ಹೇಳಿದರು: ನನ್ನನ್ನು ಅವಮಾನಿಸಬೇಡಿರಿ. ಆಹಾರ ಸ್ವಲ್ಪ ಮಾತ್ರವಿದೆ. ಹಝ಼್ರತ್ ಪೈಗಂಬರ್(ಸ)ರ ಜೊತೆಗೆ ಹೆಚ್ಚು ಜನರು ಬರದಂತೆ ನೋಡಿರಿ. ಹಝ಼್ರತ್ ಜಾಬಿರ್(ರ) ಮೆಲುದನಿಯಲ್ಲಿ ಹಝ಼್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ನೀವು ನಿಮ್ಮ ಸ್ವಲ್ಪ ಸಹಾಬಿಯರ ಜೊತೆಗೆ ನನ್ನ ಮನೆಗೆ ಬಂದು ಊಟ ಮಾಡಿರಿ. ಆಹಾರವೆಷ್ಟಿದೆ ಎಂದು ಹಝ಼್ರತ್ ಪೈಗಂಬರ್(ಸ) ಅವರೊಡನೆ ಕೇಳಿದರು. ಇಂತಿಷ್ಟು ಇದೆ ಎಂದು ಅವರು ಹೇಳಿದರು. ಹಝ಼್ರತ್ ಪೈಗಂಬರ್(ಸ) ಹೇಳಿದರು: ಅದು ಸಾಕು. ಅನಂತರ ಹಝ಼್ರತ್ ಪೈಗಂಬರ್(ಸ) ತನ್ನ ಸುತ್ತಮುತ್ತ ನೋಡಿ ಉಚ್ಚ ಸ್ವರದಲ್ಲಿ ಹೀಗೆ ಹೇಳಿದರು: ಎಲೈ ಅನ್ಸಾರ್ ಮತ್ತು ಮುಹಾಜಿರರ ಸಂಘವೇ, ಜಾಬಿರ್ ನಮ್ಮನ್ನು ಔತಣಕ್ಕಾಗಿ ಕರೆದಿದ್ದಾರೆ. ನಾವೆಲ್ಲರೂ ಹೋಗೋಣ. ಆ ಕರೆಯನ್ನು ಕೇಳಿ ಹಸಿವಿನಿಂದ ಬಳಲಿದ ಸಾವಿರದಷ್ಟು ಸಹಾಬಿಯರು ಹಝ಼್ರತ್ ಪೈಗಂಬರ್(ಸ)ರ ಜೊತೆಗೆ ಹೋಗಲು ತಯಾರಾದರು. ಹಝ಼್ರತ್ ಪೈಗಂಬರ್(ಸ) ಜಾಬಿರ್(ರ)ರೊಡನೆ ಹೀಗೆ ಹೇಳಿದರು: ನೀವು ಬೇಗನೇ ಹೋಗಿರಿ. ನಾನು ತಲುಪುವ ತನಕ ಅಡುಗೆಯ ಪಾತ್ರೆಯನ್ನು ಒಲೆಯಿಂದ ಇಳಿಸಬಾರದು ಮತ್ತು ರೊಟ್ಟಿಯನ್ನು ಪಾಕ ಮಾಡಲು ಆರಂಭಿಸಬಾರದು ಎಂದು ಪತ್ನಿಯೊಡನೆ ಹೇಳಿರಿ. ಜಾಬಿರ್(ರ) ಬೇಗನೇ ಹೋಗಿ ಪತ್ನಿಗೆ ತಿಳಿಸಿದರು. ಈಗೇನು ಮಾಡುವುದು ಎಂದು ಯೋಚಿಸಿ ಅವಳಿಗೆ ತುಂಬಾ ಗಾಬರಿ ಉಂಟಾಯಿತು. ಆದರೆ ಹಝ಼್ರತ್ ಪೈಗಂಬರ್(ಸ) ಅಲ್ಲಿ ತಲುಪುತ್ತಲೇ ಬಹಳ ಸಮಾಧಾನದಿಂದ ಸಾರಿನ ಮಡಕೆ ಮತ್ತು ಹಿಟ್ಟಿನ ಪಾತ್ರೆಯ ಮೇಲೆ ದುಆ ಮಾಡಿದರು ಮತ್ತು ರೊಟ್ಟಿಗಳನ್ನು ಪಾಕ ಮಾಡಲು ತಿಳಿಸಿದರು. ಅನಂತರ ಹಝ಼್ರತ್ ಪೈಗಂಬರ್(ಸ) ಆಹಾರ ವಿತರಿಸಲು ಆರಂಭಿಸಿದರು. ಜಾಬಿರ್(ರ) ವರದಿ ಮಾಡುತ್ತಾರೆ: ಯಾರ ಕೈಯಲ್ಲಿ ನನ್ನ ಜೀವವಿದೆಯೋ ಆ ಅಲ್ಲಾಹನ ಆಣೆ ಹಾಕಿ ಹೇಳುತ್ತೇನೆ. ಅದೇ ಆಹಾರದಿಂದ ಎಲ್ಲರೂ ಹೊಟ್ಟೆ ತುಂಬಾ ತಿಂದು ಎದ್ದರು. ಆಗಲೂ ನಮ್ಮ ಅಡುಗೆ ಪಾತ್ರೆ ಅದೇ ರೀತಿಯಲ್ಲಿ ಕುದಿಯುತ್ತಿತ್ತು ಮತ್ತು ರೊಟ್ಟಿಗಳು ಅದೇ ರೀತಿಯಲ್ಲಿ ತಯಾರಾಗುತ್ತಿದ್ದುವು. (ಸೀರತ್ ಖಾತಮನ್ನಬಿಯೀನ್(ಸ), ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಎಂ.ಎ, ಪುಟ-578)

ಅಹ್‌ಝ಼ಾಬ್ ಯುದ್ಧಕ್ಕೆ ಸಂಬಂಧಿಸಿದ ಉಳಿದ ಸಂಗತಿಗಳನ್ನು

ಮುಂದಿನ ಬಾರಿ ವಿವರಿಸುತ್ತೇನೆ. ಪ್ರಾರ್ಥನೆಗಳ ಕುರಿತು ನಾನು ಗಮನ ಸೆಳೆಯುತ್ತಾ ಬಂದಿದ್ದೇನೆ. ಈ ಕುರಿತು ಹೆಚ್ಚು ಗಮನವನ್ನು ನೀಡಿರಿ. ಅಲ್ಲಾಹನು ನಮ್ಮ ವಿಶ್ವಾಸವನ್ನು ಸುದೃಢಗೊಳಿಸಲಿ. ಪ್ರತಿಯೊಂದು ಜಾಗ, ದೇಶದಲ್ಲಿ ನೆಲೆಸಿರುವ ಅಹ್ಮದಿಯರನ್ನು, ಬಾಂಗ್ಲಾದೇಶ, ಪಾಕಿಸ್ತಾನ, ಮತ್ತು ಇತರ ಸ್ಥಳಗಳಲ್ಲಿ ಇರುವ ಪ್ರತಿಯೊಬ್ಬ ಅಹ್ಮದಿಯರನ್ನು ಎಲ್ಲ ಕೆಡುಕುಗಳಿಂದ ಅಲ್ಲಾಹನು ರಕ್ಷಿಸಲಿ. ಲೋಕವು ಯಾವ ಬೆಂಕಿಗೆ ಬೀಳುತ್ತಿದೆಯೋ ಮತ್ತು ಯಾವ ಬೆಂಕಿಗೆ ಬಹಳ ವೇಗವಾಗಿ ಧಾವಿಸಲು ಶ್ರಮಿಸುತ್ತಿದೆಯೋ ಅದರಿಂದಲೂ ಲೋಕವನ್ನು ಅಲ್ಲಾಹನು ರಕ್ಷಿಸಲಿ. ಅಲ್ಲಾಹನು ಕೃಪೆದೋರಲಿ.

ಅಲ್ಲಾಹನು ಎಲ್ಲ ಶಕ್ತಿಗಳನ್ನು ಹೊಂದಿದವನಾಗಿದ್ದಾನೆ. ಈಗಲಾದರೂ ಈ ಜನರು ಸುಧಾರಣೆಯ ಕಡೆಗೆ ಗಮನ ನೀಡಿದರೆ ಅಲ್ಲಾಹನು ಅವರನ್ನು ವಿಪತ್ತುಗಳಿಂದ ಹೊರಗೆ ಹಾಕಬಲ್ಲನು. ಅಲ್ಲಾಹನು ಅವರಿಗೆ ಬುದ್ಧಿ ಮತ್ತು ವಿವೇಕವನ್ನು ನೀಡಲಿ.

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್, 4-10-2024, ಪುಟ-2 ರಿಂದ 6)**

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಒಂದು ಕಾಲದಲ್ಲಿ ತಲೆ ನೀಡುವುದು ದೊಡ್ಡ ವಿಷಯವಿರಲಿಲ್ಲ ಮತ್ತು ಇನ್ನೊಂದು ಈ ಕಾಲದಲ್ಲಿ, ಇದರಲ್ಲಿ ಧರ್ಮದ ಶಕ್ತಿಗಳು ನ್ಯಾಯಯುತ ಸರ್ಕಾರದ ನೆರಳಿನಲ್ಲಿ ವಾಸಿಸುತ್ತಿವೆ, ವಿರೋಧಿಗಳು ಅಂತಹ ಚಿತ್ರಹಿಂಸೆಗಳನ್ನು ನೀಡುವುದಿಲ್ಲ, ಸಾಮ್ರಾಜ್ಯವು ಯಾವುದೇ ರೀತಿಯ ಹಿಂಸೆಯನ್ನು ನೀಡುವುದಿಲ್ಲ. ಧಾರ್ಮಿಕ ಜ್ಞಾನವನ್ನು ಪಡೆಯಲು ಎಲ್ಲಾ ಸೌಲಭ್ಯಗಳು ಲಭ್ಯವಿದೆ, ಧಾರ್ಮಿಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ತೊಂದರೆ ಇಲ್ಲ, ಒಂದು ಸಜದ ಮಾಡುವುದೂ ತುಂಬಾ ಕಷ್ಟವಾಗಿದೆ ತೋರುತ್ತದೆ. ಯೋಚಿಸಿರಿ ನೋಡಿ, ತಲೆ ನೀಡುವುದೆಲ್ಲಿ ಮತ್ತು ಒಂದು ಸಜದ ಮಾತ್ರ ಮಾಡುವುದೆಲ್ಲಿ! ಇಂದು ಈಮಾನ್ (ವಿಶ್ವಾಸವು) ಹೇಗೆ ಅವನತಿಯ ಸ್ಥಿತಿಯಲ್ಲಿದೆ ಎಂಬುದನ್ನು ಇದು ಸ್ಪಷ್ಟವಾಗಿ ತೋರಿಸುತ್ತದೆ.

**(ಮಲ್‌ಫೂಝಾತ್, ಸಂಪುಟ-2, ಪುಟ-40, ಆವೃತ್ತಿ 2018, ಖಾದಿಯಾನ್)**

------------*****------------

**ತಫ್ಸೀರೆ ಕಬೀರ್**

## ಯಾರು ಸರ್ವಶಕ್ತನಾದ ಅಲ್ಲಾಹನ ಧರ್ಮವನ್ನು ಬೆಂಬಲಿಸಲು ನಿಲ್ಲುತ್ತಾರೋ ಅಲ್ಲಾಹನು ಅವರಿಗೆ ಸಹಾಯ ಮಾಡುತ್ತಾನೆ

### ಜಿಹಾದ್ ಕಡ್ಡಾಯವಾಗಿರಲು ಅಗತ್ಯವಾದ ಷರತ್ತುಗಳು ಮತ್ತು ಧಾರ್ಮಿಕ ಮತ್ತು ರಾಜಕೀಯ ಯುದ್ಧಗಳ ನಡುವಿನ ವ್ಯತ್ಯಾಸ

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು ಸೂರತುಲ್ ಹಜ್ಜ್ ವಚನ 39 ಮತ್ತು ಮುಂದಿನ ವಚನಗಳ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಇಸ್ಲಾಮಿನ ಬೋಧನೆಗಳ ಪ್ರಕಾರ, ಒಂದು ರಾಷ್ಟ್ರವು ದೀರ್ಘಕಾಲದವರೆಗೆ ಮತ್ತೊಂದು ರಾಷ್ಟ್ರದ ದೌರ್ಜನ್ಯವನ್ನು ಎದುರಿಸುತ್ತಿದ್ದರೆ ಮತ್ತು ದೌರ್ಜನ್ಯ ಮಾಡುತ್ತಿರುವ ರಾಷ್ಟ್ರವು ಅವರನ್ನು **ರಬ್ಬುನಲ್ಲಾಹ್** ಎಂದು ಹೇಳುವುದನ್ನು ತಡೆಯುತ್ತಿದ್ದರೆ ಮಾತ್ರ ಯುದ್ಧವನ್ನು ಅನುಮತಿಸಲಾಗುತ್ತದೆ. ಅಂದರೆ, ಅವರ ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರೆ ಮತ್ತು ಅವರು ಜನರನ್ನು ಇಸ್ಲಾಂನಿಂದ ಬಲವಂತವಾಗಿ ದೂರವಿರಿಸುತ್ತಿದ್ದರೆ ಅಥವಾ ಅದನ್ನು ಪ್ರವೇಶಿಸದಂತೆ ಬಲವಂತವಾಗಿ ತಡೆದರೆ ಮತ್ತು ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಅಪರಾಧಕ್ಕಾಗಿ ಅದರಲ್ಲಿ ಪ್ರವೇಶಿಸುವವರನ್ನು ಕೊಂದರೆ. ಆ ರಾಷ್ಟ್ರವನ್ನು ಹೊರತುಪಡಿಸಿ ಬೇರೆ ರಾಷ್ಟ್ರದವರೊಂದಿಗೆ ಜಿಹಾದ್ ಮಾಡಲು ಸಾಧ್ಯವಿಲ್ಲ, ಆದರೆ ಯುದ್ಧವಾದರೆ ಅದು ರಾಜಕೀಯ ಮತ್ತು ಅಂತರ್ಯುದ್ಧ ಮಾತ್ರವಾಗುತ್ತದೆ, ಇದು ಎರಡು ಮುಸ್ಲಿಂ ರಾಷ್ಟ್ರಗಳ ನಡುವೆಯೂ ಇರಬಹುದು, ಆದರೆ ಅದನ್ನು ಜಿಹಾದ್ ಎಂದು ಕರೆಯಲಾಗುವುದಿಲ್ಲ ಮತ್ತು ಈ ಯುದ್ಧಕ್ಕೆ ಸೇರುವುದು ಪ್ರತಿಯೊಬ್ಬ ಮುಸಲ್ಮಾನನ ಕರ್ತವ್ಯವಲ್ಲ, ಬದಲಿಗೆ ಅದು ಆ ಹೋರಾಟದ ಸರ್ಕಾರದಲ್ಲಿ ವಾಸಿಸುತ್ತಿರುವ ಮುಸ್ಲಿಮರ ಕರ್ತವ್ಯವಾಗಿರುತ್ತದೆ ಏಕೆಂದರೆ ಈ ಯುದ್ಧವನ್ನು ದೇಶಭಕ್ತಿಯ ಯುದ್ಧ ಎಂದು ಕರೆಯಲಾಗುತ್ತದೆ. ಧಾರ್ಮಿಕ ಯುದ್ಧ ಎಂದು ಕರೆಯಲಾಗುವುದಿಲ್ಲ ಮತ್ತು ಹಝ್ರತ್ ಪೈಗಂಬರ್(ಸ)ರು **ಹುಬ್ಬುಲ್ ವತ್ನಿ ಮಿನಲ್ ಈಮಾನಿ** ಅಂದರೆ: ದೇಶ ಪ್ರೇಮವು ವಿಶ್ವಾಸದ ಒಂದು ಭಾಗವಾಗಿದೆ ಎಂದು ಹೇಳುತ್ತಾರೆ.

ಮತ್ತೆ ಇಂತಹ ದೌರ್ಜನ್ಯಕ್ಕೆ ಒಳಗಾದ ರಾಷ್ಟ್ರಕ್ಕೆ ಅಧಿಕಾರ ಲಭಿಸಿದಾಗ ಎಲ್ಲಾ ಧರ್ಮಗಳನ್ನು ರಕ್ಷಿಸುವ ಕರ್ತವ್ಯವಿದೆ ಮತ್ತು ಅವರ ಪವಿತ್ರ ಸ್ಥಳಗಳನ್ನು ಗೌರವವನ್ನು ಕಾಪಾಡಬೇಕು ಮತ್ತು ಕಾಳಜಿ ವಹಿಸಬೇಕು ಮತ್ತು ಈ ಪ್ರಾಬಲ್ಯವನ್ನು ತನ್ನ ಶಕ್ತಿ ಮತ್ತು ಶಕ್ತಿಯ ಮೂಲವಾಗಿ ಬಳಸಬಾರದು, ಬದಲಿಗೆ ಬಡವರಿಗೆ ನೆರವು, ದೇಶದ ಸ್ಥಿತಿಯನ್ನು ಸರಿಪಡಿಸಲು ಮತ್ತು ಪ್ರಲೋಬನೆ ಮತ್ತು ದುಷ್ಟತನವನ್ನು ನಿರ್ಮೂಲನೆ ಮಾಡಲು ತನ್ನ ಶಕ್ತಿಯನ್ನು ವ್ಯಯಿಸಬೇಕು. ಏಕೆಂದರೆ ಇಸ್ಲಾಮ್ ಧರ್ಮವು ಲೋಕದಲ್ಲಿ ಸಾಕ್ಷಿಯಾಗಿ ಮತ್ತು ರಕ್ಷಕನಾಗಿ ಬಂದಿದೆ, ದಬ್ಬಾಳಿಕೆ ಮತ್ತು ಹಿಂಸೆಗಾಗಿಬಂದಿಲ್ಲ. ಇಸ್ಲಾಮಿನ ಜಿಹಾದ್ ಅನ್ನು ವಿರೋಧಿಸುವವರು ಈ ರೀತಿಯ ಯುದ್ಧವನ್ನು ಯಾವಾಗ ಬೇಕಾದರೂ ಪ್ರಾರಂಭಿಸುವುದು ಮತ್ತು ಅವಿಶ್ವಾಸಿಗಳನ್ನು ಸೆರೆಹಿಡಿಯಲು ಪ್ರಾರಂಭಿಸುವುದು ಮುಸ್ಲಿಮರ ಶಕ್ತಿಯೊಳಗೆ ಇದೆಯೇ ಎಂದು ಯೋಚಿಸಬೇಕು. ಈ ರೀತಿಯ ಯುದ್ಧವು ವೈರಿಗಳಿಂದಲೇ ಪ್ರಾರಂಭವಾಗುತ್ತದೆ ಮತ್ತು ಅದನ್ನು ತಪ್ಪಿಸುವುದು ಅವನ ಶಕ್ತಿಯಲ್ಲಿದ್ದಾಗ ಮಾತ್ರ. ಅದರ ನಂತರವೂ ಅವನು ಅಂತಹ ಯುದ್ಧವನ್ನು ಮಾಡಿದರೆ ಮತ್ತು ಅವರಿಂದ ಇತರರ ಧರ್ಮವನ್ನು ಬಲವಂತವಾಗಿ ಬದಲಾಯಿಸಲು ಬಯಸಿದರೆ, ಆಗ ಅವನು ಹುಚ್ಚನಾಗಿದ್ದಾನೆ ಅಥವಾ ಅವನು ಅವನನ್ನು ಮಾಡಲು ಸಮರ್ಥನಾಗಿದ್ದರೆ ಅವನನ್ನು ಶಿಕ್ಷಿಸಬೇಕು ಏಕೆಂದರೆ ಅವನು ಆಕ್ರಮಣ ಮಾಡದ ಹಕ್ಕಿದೆ. ಇತರರನ್ನು ದಬ್ಬಾಳಿಕೆ ಮಾಡದಿರುವ ಹಕ್ಕು ಆತನಿಗಿತ್ತು. ಧರ್ಮಕ್ಕಾಗಿ ಹೋರಾಡದಿರಲು ಮತ್ತು ಮರಣ ಮತ್ತು ವಿನಾಶದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಅವನು ಹೊಂದಿದ್ದನು.

ಇಲ್ಲಿ ಒಂದು ನೆನಪಿಡಬೇಕಾದ ವಿಷಯವೇನೆಂದರೆ **ಇನ್ನಲ್ಲಾಹ ಯುದಾಫಿಉ ಅನಿಲ್ಲಝೀನ ಆಮನೂ** ವಿನ ನಂತರ **ಉಝಿನಲಿಲ್ಲಾಝೀನ ಯುಖಾತಿಲೂನ ಬಿಅನ್ನಹುಮ್ ಝುಲಿಮೂ**. ಇದರ ಮೇಲೆ ದಾಸನು ಸ್ವತಃ ಅವಿಶ್ವಾಸಿಗಳಿಂದ ಹೋರಾಡಿದರೆ ಅಲ್ಲಾಹನು ಹೇಗೆ ರಕ್ಷಣಾರ್ಥಕವಾದನು? ಎಂಬ ಆಕ್ಷೇಪ ಉದ್ಭವಿಸುತ್ತದೆ. ಈ ವಚನಗಳಲ್ಲಿ ಸತ್ಯವಿಶ್ವಾಸಿಗಳು ಸ್ಪಷ್ಟವಾಗಿ ಯುದ್ಧವಾಡಿದರೂ, ಅವರು ಮತ್ತು ಇತರ ಜನರು ದುರ್ಬಲರು ಎಂದು ತಿಳಿದಿದ್ದಾರೆ ಎಂದು ಉತ್ತರಿಸಲಾಗಿದೆ. ಅವರು ಗೆಲ್ಲಲು ಸಾಧ್ಯವಿಲ್ಲ, ಆದ್ದರಿಂದ **ಇನ್ನಲ್ಲಾಹ ಅಲಾ ನಸ್ರಿಹಿಮ್ ಲಖದೀರುನ್** ಎಂದು ಹೇಳುವ ಮೂಲಕ ಅವರಿಗೆ ನಿಜವಾದ ಯುದ್ಧವು ಸರ್ವಶಕ್ತನಾದ ಅಲ್ಲಾಹನಿಂದಲೇ ಆಗಿರುತ್ತದೆ ಎಂದು ತಿಳಿಸಲಾಯಿತು. ಸತ್ಯವಿಶ್ವಾಸಿಯು ಅವನ ಏಕೈಕ ಆಯುಧವಾಗಿರುತ್ತಾರೆ, ಅದರೊಂದಿಗೆ ಅವನು ಕೆಲಸ ಮಾಡುತ್ತಾನೆ. ವಿಜಯವನ್ನು ನೀಡುವುದು ಅವನ ಶಕ್ತಿಯಲ್ಲಿದೆ ಮತ್ತು ಈ ಯುದ್ಧವು ದೇವರಿಂದ ಮಾಡಲ್ಪಟ್ಟಿತು ಮನುಷ್ಯನಿಂದಲ್ಲ. ಮತ್ತೆ ಮುಂದಿನ ವಚನದಲ್ಲಿ **ವಲಯನ್‌ಸುರನ್ನಲ್ಲಾಹು ಮೈಯನ್‌ಸುರುಹು** ಅಂದರೆ: ಸರ್ವಶಕ್ತನಾದ ಅಲ್ಲಾಹನ ಧರ್ಮದ ಬೆಂಬಲಕ್ಕಾಗಿ ಯಾರು ನಿಲ್ಲುತ್ತಾರೋ ಸರ್ವಶಕ್ತನಾದ ಅಲ್ಲಾನಹನು ಅವರನ್ನು ಬೆಂಬಲಿಸುತ್ತಾನೆ ಎಂದು ಹೇಳಿದನು. ಸತ್ಯವಿಶ್ವಾಸಿಗಳ ಹೋರಾಟದ ನಿಜವಾದ ರಕ್ಷಣೆ ಸರ್ವಶಕ್ತನಾದ ಅಲ್ಲಾಹನ ಕೈಯಲ್ಲಿ ಉಳಿದಿರುತ್ತದೆ.

**(ತಫ್ಸೀರ್ ಕಬೀರ್, ಸಂಪುಟ-6, ಪುಟ-63, ಪ್ರಕಟಿತ ಖಾದಿಯಾನ್ 2010)**

## ಅನ್ಯ ಗೋತ್ರಗಳೊಂದಿಗೆ ವಿವಾಹ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:-**

"ನಮ್ಮ ಸಮುದಾಯದಲ್ಲಿ ಕಂಡುಬರುತ್ತಿರುವ ಒಂದು ಕೆಟ್ಟ ಸಂಪ್ರದಾಯವೇನೆಂದರೆ, ನಮ್ಮೊಳಗಿರುವ ಇತರ ಗೋತ್ರಗಳಿಗೆ ಹೆಣ್ಣು ಕೊಡಲು ಹಾಗೂ ಪಡೆದುಕೊಳ್ಳಲು ಇಷ್ಟಪಡುವುದಿಲ್ಲ. ಇದು ಅಹಂಕಾರ ಮತ್ತು ಮತ್ಸರದಿಂದಾಗಿದೆ. ಇದು ಶರಿಅತ್ತಿಗೆ ಅಪ್ಪಟ ವಿರುದ್ಧವೂ ಆಗಿರುತ್ತದೆ. ಎಲ್ಲಾ ಆದಮ್ ಸಂತತಿಗಳು ಏಕದೇವನ ದಾಸರಾಗಿದ್ದಾರೆ. ಹೆಣ್ಣು ಕೊಡುವ ಪಡೆಯುವ ವಿಷಯದಲ್ಲಿ ಗಮನಿಸಬೇಕಾದ ವಿಷಯವೇನೆಂದರೆ ಅವರು ಭಯಭಕ್ತಿ ಹಾಗೂ ಉತ್ತಮ ನಡತೆ ಹೊಂದಿರುವವರಾಗಿರಬೇಕು ಮತ್ತು ಅವರು ಯಾವುದೇ ರೀತಿಯ ಪಿತೂರಿಗೆ ಕಾರಣರಾಗಿರಬಾರದು.

ನೆನಪಿಡಿರಿ! ಇಸ್ಲಾಮಿನಲ್ಲಿ ಕುಲ, ಗೋತ್ರಗಳ ಕುರಿತು ಯಾವುದೇ ತಾರತಮ್ಯವಿಲ್ಲ. ಕೇವಲ ಭಯಭಕ್ತಿ ಮತ್ತು ಸಾತ್ವಿಕತೆಯೇ ಪ್ರಧಾನವಾಗಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಿದನು: **ಇನ್ನ ಅಕ್ರಮಕುಮ್ ಇಂದಲ್ಲಾಹಿ ಅತ್‌ಖಾಕುಮ್** (ಅಲ್‌ಹುಜರಾತ್:14) ಅಂದರೆ: ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು." (ಮಲ್ಫೂಝಾತ್ ಸಂಪುಟ-5, ಪುಟ-48-49, ಮುದ್ರಣ ಖಾದಿಯಾನ್ 2003)

**(ನಝಾರತ್ ಇಸ್ಲಾಹ್-ವ-ಇರ್‌ಶಾದ್ (ಮರ್‌ಕಝಿಯಾ, ಖಾದಿಯಾನ್)**

ಹುಝೂರ್(ಸ) ನುಡಿದರು: ***ಉರೀತುನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾಉ ಯಕ್ಫುರೂನ್***
ಅಂದರೆ ನನಗೆ ನರಕದಲ್ಲಿ ತನ್ನ ಕರ್ಮಗಳಿಂದಾಗಿ ಮಹಿಳೆಯರೇ ಹೆಚ್ಚಾಗಿ ಕಂಡರು. ಅವರು ತನ್ನ ಪತಿಗೆ ಅವಿಧೇಯತೆ, ಕೃತಘ್ನತೆ ತೋರುವವರಾಗಿದ್ದರು.

## ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು

**ಸೂಚನೆ:–** ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

*(ಭಾಗ–2)*

**ಪ್ರಶ್ನೆ:** ಆಸ್ಟ್ರೇಲಿಯಾದ ವಾಖಿಫಾತ್ ಸಾವಿನ ಅದೇ ಕಾರ್ಯಕ್ರಮ ಗುಲ್ಶನೆ ವಕ್ಫೆ ನೌ ದಿನಾಂಕ: 12 ಅಕ್ಟೋಬರ್ 2013 ರಲ್ಲಿ ಓರ್ವ ಬಾಲಕಿ ಹುಝೂರ್‌ರ ಸೇವೆಯಲ್ಲಿ ಪ್ರಶ್ನೆ ಮಾಡಿದಳು. ರಂಝಾನಿನಲ್ಲಿ ಆವು ಯಾವ ವಯಸ್ಸಿನಲ್ಲಿ ಉಪವಾಸ ಪ್ರಾರಂಭಿಸಬೇಕು? ಈ ಪ್ರಶ್ನೆ ಉತ್ತರ ನೀಡುತ್ತಾ ಅವರು ಹೇಳಿದರು.

**ಉತ್ತರ:** ನಿಮ್ಮ ಪ್ರಕಾರ ರೂಪದಲ್ಲಿ ಪ್ರೌಢಾವಸ್ಥೆಗೆ ಬಂದಾಗ ನಿಮಗೆ ಉಪವಾಸ ಕಡ್ಡಾಯವಾಗುತ್ತದೆ. ನೀವು ವಿದ್ಯಾರ್ಥಿಯಾಗಿದ್ದರೆ, ನಿಮ್ಮ ಪರೀಕ್ಷೆಗಳು ನಡೆಯುತ್ತಿದ್ದರೆ ಆ ದಿನಗಳಲ್ಲಿ ನಿಮ್ಮ ವಯಸ್ಸು 13, 14, 15 ವರ್ಷಗಳಾಗಿದ್ದರೆ ನೀವು ಉಪವಾಸ ನಿರ್ವಹಿಸುವುದು ಬೇಡ, ನಿಮ್ಮಲ್ಲಿ ಸಹಿಸುವ ಶಕ್ತಿ ಇದ್ದರೆ 15 ವರ್ಷದ ವಯಸ್ಸಿನಲ್ಲಿ ಉಪವಾಸ ಇಡಬಹುದು. ಆದರೆ ಸಾಮಾನ್ಯವಾಗಿ ಉಪವಾಸವು 17, 18 ವರ್ಷಗಳ ಮೇಲೆ ಕಡ್ಡಾಯವಾಗುತ್ತದೆ. ಆನಂತರ ಉಪವಾಸ ಇಡಲೇಬೇಕಾಗಿದೆ. 8, 10 ವರ್ಷದ ವಯಸ್ಸಿನಲ್ಲಿ 3, 4, ಉಪವಾಸಗಳು ಐಚ್ಛಿಕವಾಗಿ ಇರಬಯಸುವುದಾದರೆ ಇರಬಹುದು. ಆದರೆ ಕಡ್ಡಾಯವೇನಲ್ಲ. ನೀವು ಪ್ರೌಢಾವಸ್ಥೆಗೆ ಬಂದಾಗ, ಶಕ್ತಿಬಂದಾಗ ನಿಮಗೆ ಉಪವಾಸ ಕಡ್ಡಾಯವಾಗಿರುವುದು, ಇಲ್ಲಿ (ಆಸ್ಟ್ರೇಲಿಯಾದಲ್ಲಿ ಲೇಖಕರು) ವಿವಿಧ ಋತುಗಳಲ್ಲಿ ಎಷ್ಟು ವ್ಯತ್ಯಾಸವಿರುತ್ತದೆ. Day night ಎಷ್ಟು ಗಂಟೆಯದ್ದಾಗಿರುತ್ತದೆ? ಹೌದು ನೀವು 19 ಗಂಟೆ ಹಸಿವಿನಿಂದ ಇರಲಾರಿರಿ. ಯು.ಕೆ ಯಲ್ಲೂ ಸಹ ಇಂದು. ಹಿಂದೆ ಕಳೆದ ಶೆಕೆಗಾಲದ ನಿಮ್ಮ ಉಪವಾಸ ಸಣ್ಣವಾಗಿದ್ದವು ಮತ್ತು ಅಲ್ಲಿ ದೀರ್ಘವಾಗಿದ್ದವು. 18 ವರೆ ಸ್ಥಳಗಳಲ್ಲೂ 22 ಗಂಟೆಗಳ ಉಪವಾಸವಿರುತ್ತದೆ. ಅಂತೂ ಅಲ್ಲಿ ಸಮಯವನ್ನು Adjust ಮಾಡಬೇಕಾಗುತ್ತದೆ. ಏಕೆಂದರೆ ಅಷ್ಟೊಂದು ದೀರ್ಘ ಸಮಯದ ಉಪವಾಸ ಇರಲಾಗದು. ಆದರೆ ಸಹನೆ ಶಕ್ತಿ ಬರುವುದು ಪ್ರೌಢಾವಸ್ಥೆಗೆ ಬಂದಾಗ, ಕನಿಷ್ಠ 17, 18 ವರ್ಷದವರಾದರೆ ಸರಿ. ಉಪವಾಸ ಮಾಡಬಹುದು. ತಿಳಿಯಿತಾ? ನಿಮ್ಮ ತಂದೆ ತಾಯಿಯರು ಏನು ಹೇಳುತ್ತಾರೆ? ಹತ್ತು ವರ್ಷದಲ್ಲಿ ಕಡ್ಡಾಯವಾಗಿದೆ ಎಂದು ಹೇಳುತ್ತಾರೆಯೇ? ಆದರೆ ಅಭ್ಯಾಸ ಮಾಡಿಕೊಳ್ಳಿ. ಸಣ್ಣ ಮಕ್ಕಳಿಗೆ ಸಹ 2, 3 ಉಪವಾಸ ರಂಝಾನ್‌ನಲ್ಲಿ ಇರಬಹುದಾಗಿದೆ. ಏಕೆಂದರೆ ರಂಝಾನ್ ಬಂದಿದೆ ಎಂದು ಅರಿವಾಗಬೇಕು. ಆದರೆ ಉಪವಾಸ ಇರದಿದ್ದರೂ ಬೆಳಿಗ್ಗೆ ಬೇಗ ಏಳಿರಿ. ತಂದೆ ತಾಯಿಯರ ಜೊತೆ ಸೆಹರಿ ಮಾಡರಿ. ನಫಲ್ ನಿರ್ವಹಿಸಿರಿ. ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಿರಿ, ನಿಮ್ಮ ಅಂದರೆ ವಿದ್ಯಾರ್ಥಿಗಳ ಮತ್ತು ಮಕ್ಕಳ ರಂಝಾನ್ ಎಂದರೆ ಏಳಬೇಕು, ಸೆಹರಿ ಉಣ್ಣಬೇಕು, ಅದರ ಮುಂಚೆ ಎರಡು ಅಥವಾ ನಾಲ್ಕು ನಫಲ್ ಅನುಷ್ಠಿಸಬೇಕು, ಮತ್ತೆ ನಮಾಝ್‌ಗಳನ್ನು ವಿಧಿಬದ್ಧವಾಗಿ ನಿರ್ವಹಿಸಬೇಕು, ಪವಿತ್ರ ಖುರ್‌ಆನ್ ಕ್ರಮಬದ್ಧವಾಗಿ ಪಠಿಸಬೇಕು.

**ಪ್ರಶ್ನೆ:** ಮಿತ್ರರೊಬ್ಬರು ಹುಝೂರ್ ಅನ್ವರ್(ಅಬಿಅ) ರವರ ಸೇವೆಯಲ್ಲಿ ಪ್ರಸ್ತಾಪಿಸಿದರು. ಇಸ್ಲಾಮಿನಲ್ಲಿ ಯಾವ ಆಧಾರದ ಮೇಲೆ ಜಾನುವಾರುಗಳ ಮಾಂಸವನ್ನು ತಿನ್ನುವುದು ಹಲಾಲ್ ಅಥವಾ ಹರಾಮ್ (ಧರ್ಮಬದ್ಧ ಅಥವಾ ಧರ್ಮನಿಷಿದ್ಧ) ಎಂದು ಪರಿಗಣಿಸಲಾಗುತ್ತದೆ?

ಹುಝೂರ್ ಅನ್ವರ್(ಅಬಿಅ) ತನ್ನ ಪತ್ರದಲ್ಲಿ ದಿನಾಂಕ: 11 ಏಪ್ರಿಲ್ 2016 ರಲ್ಲಿ ಅದರ ಉತ್ತರ ಈ ಕೆಳಗಿನಂತೆ ನೀಡಿರುವರು.

**ಉತ್ತರ:** ಒಂದು ವಸ್ತುವಿನ ಹಲಾಲ್ ಅಥವಾ ಹರಮ್ ಕುರಿತು ಇಸ್ಲಾಮ್ ಧರ್ಮದ ತತ್ವವೇನೆಂದರೆ ಶರೀಅತ್ ನಿಷಿದ್ಧಗೊಳಿಸದಂತಹವುಗಳು ಜಾಯಿಝ್ ಆಗಿರುತ್ತವೆ. ಅಂದ ಹಾಗೆ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. "ವಸ್ತುಗಳ ಪಾವಿತ್ರ್ಯತೆಯೇ ಅಸಲಾಗಿದೆ. ನಿರ್ದಿಷ್ಟವಾಗಿ ಎಲ್ಲಿಯವರೆಗೆ ಅದರ ಪಾವಿತ್ರತ್ಯತೆ ಸಾಬೀತಾಗುವುದಿಲ್ಲ ಮಾನ್ಯತೆ ದೊರೆಯುವುದಿಲ್ಲ. (ಮಲ್ಫೂಝಾತ್, ಸಂಪುಟ–2, ಪುಟ–474)

ಪವಿತ್ರ ಖುರ್‌ಆನ್ ಸತ್ತ ಪ್ರಾಣಿ, ಹರಿದ ರಕ್ತ, ಹಂದಿ ಮಾಂಸ. ಮಲಿನವಾದುದು, ಅಲ್ಲಾನ ಹೊರತು ಇತರರಿಗೆ ಅರ್ಪಿಸಲ್ಪಟ್ಟಿದ್ದು ಹರಾಮ್ ಎಂದು ಪರಿಗಣಿಸಲಾಗಿದೆ. (ಸೂರ: ಅಲ್‌ಅನ್‌ಆಂ–146)

ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾದ ಈ ನಾಲ್ಕು ವಸ್ತುಗಳನ್ನು ಹರಾಮ್ ಎನ್ನಲಾಗಿದೆ. ಅದಾಗ್ಯೂ ಕೆಲ ವಸ್ತುಗಳನ್ನು ಹಝ್ರತ್ ರಸೂಲುಲ್ಲಾಹ್(ಸ) ನಿಷೇಧಿಸಿದರು. ಅದನ್ನು ಮಮ್ನು (ನಿಷೇಧಿಸಲ್ಪಟ್ಟದ್ದು) ಎನ್ನುತ್ತಾರೆ. ಉದಾಹರಣೆಗೆ ಬೇಟೆಯಾಡುವ ಜಾನುವಾರುಗಳು ನಿಷೇಧಿತವಾಗಿವೆ. ಅದರಲ್ಲಿ ಕ್ರೂರ ಪ್ರಾಣಿಗಳು, ಬೇಟೆಯಾಡುವ ಪಕ್ಷಿಗಳು ಇತ್ಯಾದಿ ಸೇರಿವೆ. ಈ ವಸ್ತುಗಳ ನಿಷೇದವು ಹದೀಸುಗಳಿಂದ ಸಾಬೀತಾಗಿದೆ. ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. (ಸಹೀ ಮುಸ್ಲಿಂ)

ಅನುವಾದ:– ರಸೂಲುಲ್ಲಾಹ್(ಸ) ಚೂಪಾದ ಉಗುರುಗಳಿರುವ ಎಲ್ಲಾ ಮೃಗಗಳನ್ನು ಮತ್ತು ಪಕ್ಷಿಗಳನ್ನು ತಿನ್ನುವುದು ನಿಷಿದ್ಧ ಎಂದಿದ್ದಾರೆ. ಅದೇ ರೀತಿ ಹದೀಸಿನಲ್ಲಿ ಬರುತ್ತದೆ. (ಸಹೀ ಬುಖಾರಿ).

ಅನುವಾದ :ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ಖೈಬರ್ ಯುದ್ಧ ಸಂದರ್ಭದಲ್ಲಿ ಸಾಕು ಕತ್ತೆಗಳ ಮಾಂಸ ತಿನ್ನುವುದನ್ನು ನಿಷೇಧಿಸಿದರು.

ಹರಾಮ್ ಮತ್ತು ಮಮ್ನು (ಧರ್ಮ ನಿಷಿದ್ಧ ಮತ್ತು ನಿಷಿದ್ಧ) ವ್ಯಾಖ್ಯಾನ ಮಾಡುತ್ತಾ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರು(ರ) ನುಡಿಯುತ್ತಾರೆ.

"ನೆನಪಿಡಬೇಕಾದ ಕಾರ್ಯವೆಂದರೆ ಇಸ್ಲಾಮಿ ಶರೀಅತ್ತಿನಲ್ಲಿ ಯಾವ ವಸ್ತುಗಳನ್ನು ನಿಷೇಧಗೊಳಿಸಲಾಗಿದೆ. ಎರಡು ವಿಧಗಳದ್ದಾಗಿವೆ. ಪ್ರಥಮವಾಗಿ ಹರಾಮ್, ಎರಡನೆಯದು ಮಮ್ನು, ವ್ಯಾಕರಣ ದೃಷ್ಟಿಯಿಂದ ಹರಾಮ್ ಪದ ಎರಡೂ ಒಂದೇ ಅರ್ಥ ಕೊಡುವಂತಿದೆ. ಆದರೆ ಪವಿತ್ರ ಖುರ್‌ಆನ್ ಈ ವಚನ (ಅಲ್ ಬಖರ–174) ರಲ್ಲಿ ಕೇವಲ ನಾಲ್ಕು ವಸ್ತುಗಳನ್ನು ಹರಾಮ್ ಎಂದು ಹೇಳಿದೆ. ಅಂದರೆ ಸತ್ತ ಪ್ರಾಣಿ, ಹರಿದ ರಕ್ತ, ಹಂದಿ ಮಾಂಸ ಮತ್ತು ಅಲ್ಲಾಹೇತರರಿಗೆ ಅರ್ಪಿಸಿದ ಎಲ್ಲಾ ವಸ್ತುಗಳು, ಇದರ ಹೊರತಾಗಿಯೂ ಶರೀಅತ್ತಿನಲ್ಲಿ ಕೆಲ ಇನ್ನಿತರ ವಸ್ತುಗಳ ಬಳಕೆಯಿಂದಲೂ ತಡೆಯಲಾಗಿದೆ. ಆದರೆ ಆ ವಸ್ತುಗಳು "ಮಮ್ನುಅ ವಸ್ತುಗಳ ಪಟ್ಟಿಯಲ್ಲಿ ಬರುವುದು, ಖುರ್‌ಆನ್‌ನ ಪ್ರಕಾರ ಅವು ಹರಾಮ್ ಎಂದಾಗುವುದಿಲ್ಲ.

ಈ ಆಜ್ಞೆಗಳು ಈ ವಚನ ಅಥವಾ ಅನ್ಯವಚನಗಳ ವಿಷಯಗಳಿಗೆ ವಿರೋಧವಾಗಿಲ್ಲ. ಏಕೆಂದರೆ ಯಾವ ರೀತಿ ಆಜ್ಞೆಗಳು ಹಲವು ರೀತಿಯದ್ದಾಗಿರುತ್ತವೆ. ಕೆಲವು ಫರ್ಝ್ (ಕಡ್ಡಾಯ) ಇವೆ. ಕೆಲವು ವಾಜಿಬ್ ಇವೆ. ಮತ್ತು ಕೆಲವು ಸುನ್ನತ್ ಇವೆ. ಅದೇ ರೀತಿ ನಿಷೇಧಗಳು ಸಹ ಹಲವು ವಿಧಗಳದ್ದಾಗಿವೆ. ಒಂದು (ಸಹಿ ವಸ್ತುವೂ) ನಿರ್ದಿಷ್ಟ ಹರಾಮ್ ಆಗಿದೆ. ಇನ್ನೊಂದು ಸಹಿ ಮಾನಿಅ (ನಕಾರಾತ್ಮಕ ನಿಷೇಧಿತ) ಇನ್ನೊಂದು ಸಹಿ ತನ್‌ಝೀಹಿ (ಇಷ್ಟವಿಲ್ಲದ ವಸ್ತುಗಳು ಮಕ್ರೂಹ್) ಅಂದ ಹಾಗೆ ಹರಾಮ್ ನಾಲ್ಕು ವಸ್ತುಗಳಾಗಿವೆ. ಉಳಿದವು ಮಮ್ನು (ನಿಷೇಧಿತವಾಗಿವೆ) ಅದಕ್ಕಿಂತ ಹೆಚ್ಚಾಗಿ ಮಕ್ರೂಹ್ ಇಷ್ಟವಿಲ್ಲದ (ತನ್‌ಝೀಹ್‌ಗಳಾಗಿವೆ) ಅಂದರೆ ಅದರಿಂದ ದೂರವಿರುವುದೇ ಮನುಷ್ಯನಿಗಾಗಿ ಹಿತವಿದೆ. ಹರಾಮ್ ಮತ್ತು ಮಮ್ನು ಪೈಕಿ ಫರ್ಝ್ ಮತ್ತು ವಾಜಿಬ್‌ನಲ್ಲಿರುವಷ್ಟೇ ವ್ಯತ್ಯಾಸವಿದೆ. ಅಂದ ಹಾಗೆ ಯಾವ ವಸ್ತುಗಳನ್ನು ಪವಿತ್ರ ಖುರ್‌ಆನ್ ಹರಾಮ್ (ನಿಷಿದ್ಧ) ಎಂದಿದೆಯೋ ಅದರ ಪಾವಿತ್ರ್ಯತೆ ಅತ್ಯಂತ ಕಠಿಣವಾಗಿದೆ. ಮತ್ತು ಯಾವುದನ್ನು ಹಝ್ರತ್ ರಸೂಲುಲ್ಲಾಹ್(ಸ) ನಿಷೇಧ ಎಂದಿರುವರೋ ಅದರ ಪಾವಿತ್ರ್ಯತೆ ಅದಕ್ಕಿಂತ ಕಡಿಮೆ ಪ್ರಮಾಣದ್ದಾಗಿದೆ ಮತ್ತು ನಾನು ಹೇಳಿದಂತೆ ಆದೇಶಗಳಲ್ಲಿ ಅದರ ಉದಾಹರಣೆ ಫರ್ಝ್, ವಾಜಿಬ್ ಮತ್ತು ಸುನ್ನದಂತಿದೆ. ಹರಾಮ್ ಎಂಬುದು ಫರ್ಝ್ ಸ್ಥಾನದಲ್ಲಿ ಬರುತ್ತದೆ. ಯಾವ ರೀತಿಯಲ್ಲಿ ಫರ್ಝ್ ಮತ್ತು ವಾಜಿಬ್ (ಕಡ್ಡಾಯ ಮತ್ತು ಅನಿವಾರ್ಯ) ಗಳಲ್ಲಿ ಶಿಕ್ಷೆಗಳನ್ನು ಗುರುತಿಸಲಾಗುತ್ತದೆಯೋ, ಅದೇ ರೀತಿಯ ವಸ್ತುಗಳ ಪಾವಿತ್ರ್ಯತೆ (ಹುರ್‌ಮತ್) ಪವಿತ್ರ ಖುರ್‌ಆನ್‌ನಲ್ಲಿ ಬಂದಿರುತ್ತದೆ. ಮನುಷ್ಯನು ಅದರಂತೆ ಬಳಸಿದರೆ ಅದರ ಶಿಕ್ಷೆ ಹೆಚ್ಚು ಕಠಿಣವಾಗುವುದು. ಯಾವುದರಿಂದ

ಹಝ್ರತ್ ರಸೂಲುಲ್ಲಾಹ್(ಸ) ನಿಷೇಧಿಸಿದ್ದಾರೆ. ಅದರ ಉಪದೇಶದಿಂದ ಕಡಿಮೆ ದರ್ಜೆಯ ಶಿಕ್ಷೆ ದೊರೆಯುವುದು. ಆದರೆ ಎರಡೂ ಅಪರಾಧ ಶಿಕ್ಷೆಗೆ ಅರ್ಹವಾಗಿವೆ ಮತ್ತು ಅಲ್ಲಾಹನ ಅಸಂತುಷ್ಟಿಗೆ ಕಾರಣವಾಗುವುದು. ಹರಾಮ್ ಕರ್ಮದಿಂದ ಮನುಷ್ಯನ ವಿಶ್ವಾಸದ ಮೇಲೆ ಪ್ರಭಾವ ಬೀಳುತ್ತದೆ. ಮತ್ತು ಅದರ ಪರಿಣಾಮ ನಿಶ್ಚಯವಾಗಿಯೂ ಕೆಟ್ಟದಾಗಿರುತ್ತದೆ. ಆದರೆ ಇತರ ವಸ್ತುಗಳ ಬಳಕೆಯಿಂದ ಪರಿಣಾಮ ನಿಶ್ಚಿತ ರೂಪದಲ್ಲಿ ಕೆಟ್ಟದ್ದು ಮತ್ತು ಅವಿಶ್ವಾಸ ರೂಪದಲ್ಲಿ ಬರುವುದಿಲ್ಲ. ಅಂದ ಹಾಗೆ ನೋಡಿಕೊಳ್ಳಿ. ಮುಸಲ್ಮಾನರಲ್ಲಿ ಕೆಲ ಪಂಥದವರು ವಿವಿಧ ವಿಶ್ಲೇಷಣೆಗಳನ್ನು ನೀಡಿ ಆ ವಸ್ತುಗಳನ್ನು ಬಳಕೆ ಮಾಡಿಕೊಳ್ಳುತ್ತಾರೆ ಮತ್ತು ತಿನ್ನುತ್ತಾರೆ. ಉದಾಹರಣೆಗೆ ಮಾಲಿಕಿ ಅದರ ಪರಿಣಾಮ ಅವರ ವಿಶ್ವಾಸದ ಮೇಲೆ ಆಗುವುದಿಲ್ಲ. ಅವರಲ್ಲಿ ಅವಿಶ್ವಾಸ ಮತ್ತು ಪಾಪ ಬರುವುದಿಲ್ಲ. ಬದಲು ಗತಕಾಲಗಳಲ್ಲಿ ಸಜ್ಜನರು (ಅನ್‌ಲಿಯಾ ಅಲ್ಲಾಹ್) ಸಹ ಜನ್ಮ ತಾಳಿದ್ದಾರೆ. ಆದರೆ ಹಂದಿ ಮಾಂಸ ಅಥವಾ ಸತ್ತ ಪ್ರಾಣಿ ತಿನ್ನುವವ ಯಾವ ವ್ಯಕ್ತಿಯೂ ಅಲ್ಲಾಹನ ದೃಷ್ಟಿಯಲ್ಲಿ ಸಜ್ಜನನಾಗುವುದಿಲ್ಲ. ಅಂದ ಹಾಗೆ ಪಾವಿತ್ರ್ಯತೆಗೂ ದರ್ಜೆಗಳಿವೆ. ಆ ನಾಲ್ಕು ಹರಾಮ್ (ಧರ್ಮನಿಷಿದ್ಧ) ವಸ್ತುಗಳ ಹೊರತು ಉಳಿದ ಎಲ್ಲಾ ನಿಷೇಧಿತ ವಸ್ತುಗಳು (ಮಮ್ನೂಅ ವಸ್ತುಗಳು) ಅದನ್ನು ಸಾಮಾನ್ಯ ರೀತಿಯಲ್ಲಿ ಹರಾಮ್ ಎನ್ನುತ್ತಾರೆ. ಆದರೆ ಖುರ್‌ಆನ್ ಪ್ರಕಾರ ಅವು ಹರಾಮ್ ಅಲ್ಲ. (ತಫ್ಸೀರ್ ಕಬೀರ್ ಸಂ 2, ಪುಟ 340).

ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ಹರಾಮ್ ಮತ್ತು ಹರಾಮಿನ ತತ್ವ ವಿವರಿಸುತ್ತಾ ಹೇಳುತ್ತಾರೆ:

"ಪವಿತ್ರ ಖುರ್‌ಆನ್‌ನಲ್ಲಿ ಬಂದಿದೆ. **ಲಾ ತಖೂಲೂ ಲಿಮಾ ತಸಿಫೂ ಅಲ್‌ಸಿನತುಕುಮುಲ್ ಕಝಿಬ ಹಾಝಾ ಹಲಾಲುನ್‌ವ್ವ ಹಾಝಾ ಹರಾಮಿಲ್ಲಿತಫ್ತರೂ ಅಲಲ್ಲಾಹಿಲ್ ಕಝಿಬ, ಇನ್ನಲ್ಲಝೀನ ಯಫ್ತರೂನ ಅಲಲ್ಲಾಹಿಲ್ ಕಝಿಬ ಲಾ ಯುಫ್ಲಿಹೂನ್.**

ಇದು ಅಲ್ಲಾಹನ ಮೇಲೆ ಅಪವಾದ ಹೇರಿದಂತೆ, ಅದನ್ನು ಹಲಾಲ್ ಅಥವಾ ಹರಾಮ್ ಎನ್ನುವುದು. ಅಲ್ಲಾಹನು ಹೇಳಿದನು. **ಹರ್ರಮ ಅಲೈಕುಮುಲ್ ಮೈತತ ವದ್ದಮ ವ ಲಹ್ಮಲ್ ಖಿನ್‌ಝೀರಿ ವಮಾಉಹಿಲ್ಲ ಬಿಹೀ ಲಿಗೈರಿಲ್ಲಾಹ್**

ಹದೀಸಿನಲ್ಲಿ ರಸೂಲುಲ್ಲಾಹ್(ಸ) ನುಡಿದರು. ಯಾವ ಪ್ರಾಣಿ ಬೇಟೆಯಾಡುತ್ತದೆಯೋ ಅದು ಹರಾಮಾಗಿದೆ. ಅದರಲ್ಲಿ ಕ್ರೂರ ಪ್ರಾಣಿಗಳು, ಬೇಟೆಯಾಡುವ ಪಕ್ಷಿಗಳೆಲ್ಲ ಸೇರಿವೆ. ಈಗ ಅದಕ್ಕಿಂತ ಹೆಚ್ಚು ಹಲಾಲ್ ಹರಾಮ್ ಎನ್ನುವ ಅಧಿಕಾರ ಯಾರಿಗೂ ಇಲ್ಲ. ಆದರೆ ಲೋಕದಲ್ಲಿ ಸಾವಿರಾರು ಪ್ರಾಣಿಗಳಿವೆ. ಅದರಲ್ಲಿ ಯಾವುದನ್ನು ತಿನ್ನಬೇಕು. ಯಾವುದನ್ನು ಬೇಡ ಕಂಡು ಹಿಡಿಯುವುದು ಕಷ್ಟಸಾಧ್ಯ. ಈ ಕಠಿಣನತೆಯನ್ನು ಅಲ್ಲಾಹನು ಸರಳವಾಗಿ ಪರಿಹರಿಸಿದ್ದಾನೆ.

**ಫಕುಲು ಮಿಮ್ಮಾ ರಝುಖಕುಮುಲ್ಲಾಹು ಹಲಾಲನ್ ತಯ್ಯಿಬನ್ ವಶ್ಕುರೂ ನಿಮತಲ್ಲಾಹಿ ಇನ್ ಕುನ್ತುಮ್ ಇಯ್ಯಾಹು ತಬುದೂನ್** ಅಂದರೆ ಹಲಾಲ್ ಪರಿಶುದ್ಧವಾದುದನ್ನು ತಿನ್ನಿರಿ. ಇದೀಗ ನಿಚ್ಚಳಗೊಳಿಸಿದಂತಾಯಿತು. ಯಾವ ವಸ್ತು ಪರಿಶುದ್ಧವಾಗಿದೆಯೋ ಅವುಗಳನ್ನು ತಿನ್ನಿರಿ. ಅಂದ ಹಾಗೆ ಎಲ್ಲಾ ಕಡೆ ಎಲ್ಲಾ ಸಮುದಾಯಗಳಲ್ಲಿ ಯಾವ ವಸ್ತುಗಳು ಉತ್ತಮ ಮತ್ತು ಪರಿಶುದ್ಧವಾಗಿರುವುದೋ ಅದನ್ನು ಸಜ್ಜನರು ಮತ್ತು ಸುಸಂಸ್ಕೃತರು ತಿನ್ನುತ್ತಾರೆ. ಅದನ್ನು ತಿನ್ನಿರಿ. ಅದರಲ್ಲಿ ಮೊದಲು ವಿವರಿಸಲಾದ ಹೊರತಾದ ವಸ್ತುಗಳಿಂದ ಉಳಿದುಕೊಳ್ಳುವುದು ಅವಶ್ಯವಾಗಿರುತ್ತದೆ. ಗಿಳಿ ತಿನ್ನುವುದರಲ್ಲಿ ಅಡ್ಡಿಯಿಲ್ಲ. ಆದರೆ ನಾನು ತಿನ್ನಲಾರೆ. ಏಕೆಂದರೆ ನಮ್ಮ ದೇಶದ ಸಜ್ಜನರು ತಿನ್ನುವುದಿಲ್ಲ. ಒಂದು ಸಂದರ್ಭದಲ್ಲಿ ಒಬ್ಬರು ನನ್ನ ಮುಂದೆ ಝುಖ್ ಅಡುಗೆ ಮಾಡಿ ತಿಂದರು ಮತ್ತು ಊಟ ಮಾಡಲು ಹೇಳಿದರು. ನಾನು ಹೇಳಿದೆ. ಸಂತೋಷದಿಂದ ನನ್ನ ಬಳಿ ಕುಳಿತುಕೊಂಡು ಊಟ ಮಾಡಿರಿ. ಆದರೆ ನಾನು ತಿನ್ನುವುದಿಲ್ಲ. ಏಕೆಂದರೆ ಸಜ್ಜನರು ಅದನ್ನು ತಿನ್ನುವುದಿಲ್ಲ. (ಅಖ್ಬಾರ್ ಬದರ್ ಸಂಖ್ಯೆ-19 ಸಂಪುಟ-10, 09-03-1911, ಪುಟ-1)

**ಪ್ರಶ್ನೆ:** ಮಹಿಳೆಯೋರ್ವಳು ಇಸ್ಲಾಮಿನಲ್ಲಿ ಸ್ತ್ರೀ ಮತ್ತು ಪುರುಷರ ಸಮಾನತೆಯ ಕುರಿತು ತನ್ನ ಕೆಲ ಸಮಸ್ಯೆಗಳನ್ನು ವಿವರಿಸಿ ಇಸ್ಲಾಮಿನಲ್ಲಿರುವ ಕೆಲವು ಆಜ್ಞೆಗಳ ಕುರಿತು ಹುಝೂರ್ ಅನ್ವರ್ (ಅಬಿಅ) ರವರಲ್ಲಿ ಮಾರ್ಗದರ್ಶನ ಯಾಚಿಸಿದಳು. ಅದರ ಉತ್ತರವಾಗಿ ಹುಝೂರ್ ಅನ್ವರ್ ದಿನಾಂಕ: 11 ಏಪ್ರಿಲ್ 2016 ರ ತನ್ನ ಪತ್ರದಲ್ಲಿ ಈ ಕೆಳಗಿನ ಉತ್ತರವನ್ನು ನೀಡಿದರು.

**ಉತ್ತರ:** ನೀವು ಪತ್ರದಲ್ಲಿ ವಿವರಿಸಿದ ಆಕ್ಷೇಪಗಳು ಇಸ್ಲಾಂನ ಶಿಕ್ಷಣಗಳ ಮತ್ತು ಮಾನವ ಪ್ರಕೃತಿ ಮನವರಿಕೆಯಾಗದ ಕಾರಣದಿಂದಾಗಿ ಉದ್ಭವಿಸಿದೆ. ಇಸ್ಲಾಂ ಧರ್ಮವು ಎಲ್ಲಿಯೂ ಸಹ ಎಲ್ಲಾ ವಿಷಯಗಳಲ್ಲಿ ಸ್ತ್ರೀ ಪುರುಷರು ಸಮಾನರಾಗಿದ್ದಾರೆ ಎಂಬ ದಾವೆ ಮಾಡಲಿಲ್ಲ. ಇಸ್ಲಾಂ ಧರ್ಮವೇ ಏಕೆ ಮಾನವ ಪ್ರಕೃತಿ ಸಹ ಅದನ್ನು ಒಪ್ಪುವುದಿಲ್ಲ.

ಹೌದು ಇಸ್ಲಾಂ ಧರ್ಮವು ಅವಶ್ಯವಾಗಿ ಈ ಶಿಕ್ಷಣ ನೀಡಿದೆ. ಸತ್ಕರ್ಮಗಳ ವಿಷಯಗಳಲ್ಲಿ ಯಾವ ರೀತಿ ಅಲ್ಲಾಹನು ಪುರುಷರಿಗೆ ಅನುಗ್ರಹ ಮತ್ತು ತನ್ನ ಔದಾರ್ಯಗಳಿಂದ ದಯಪಾಲಿಸುತ್ತಾನೋ ಅದೇ ರೀತಿ ಸ್ತ್ರೀಯರಲ್ಲಿ ತನ್ನ ಅನುಗ್ರಹ ಔದಾರ್ಯಗಳಿಂದ ದಯಪಾಲಿಸುತ್ತಾನೆ. ಅಲಾಹನು ಹೇಳುತ್ತಾನೆ. **ಫಸ್ತಜಾಬಲಹುಮ್ ರಬ್ಬುಹುಮ್ ಅನ್ನಿ ಲಾ ಅಝೀಉ ಅಮಲ ಆಮಿಲಿನ್ ಮಿಂಕುಮ್ ಮಿನ್ ಝಕರಿನ್ ಔ ಉನ್ಸಾ ಬಝುಕುಮ್ ಮಿನ್ ಬಝಿನ್ ಫಲ್ಲಝೀನ ಹಾಜರೂ ವ ಅಖ್ರಿಜೂ ಮಿನ್ ದಿಯಾರಿಹಿಮ್ ವೂಝೂ ಫೀ ಸಬೀಲಿ ವಖಾತಿಲೂ ವ ಖುತಿಲೂ ಲುಕಫ್ಫಿರನ್ನ ಅನ್ಹುಮ್ ಸಯ್ಯಿಆತಿಹಿಮ್ ವಲಉದ್ಖಿಲನ್ನಹುಮ್ ಜನ್ನಾತಿನ್ ತಜ್ರೀ ಮಿನ್ ತಹ್ತಿಹಲ್ ಅನ್ಹಾರು ಸವಾಬಮ್ಮಿನ್ ಇಂದಿಲ್ಲಾಹಿ ವಲ್ಲಾಹು ಇಂದಹೂ ಹುಸ್ನುಸ್ಸವಾಬ್** (ಸೂರಃ ಅಲಿ ಇಮ್ರಾನ್: 196)

ಅನುವಾದ: ಹಾಗೆ ಅವರ ಪ್ರಭೂ ಅವರ ಪ್ರಾರ್ಥನೆಗೆ ಉತ್ತರವಿತ್ತನು. ಖಂಡಿತವಾಗಿಯೂ ನಿಮ್ಮ ಪೈಕಿ ಪುರುಷನಾಗಲಿ, ಸ್ತ್ರೀಯಾಗಲಿ, ಯಾರ ಕರ್ಮವನ್ನೂ ನಾನು ನಿಷ್ಫಲಗೊಳಿಸಲಾರೆ. ನಿಮ್ಮಲ್ಲಿ ಕೆಲವರಿಗೆ ಕೆಲವರೊಡನೆ, (ಪರಸ್ಪರ) ಸಂಬಂಧವಿದೆ. ಆದ್ದರಿಂದ (ಧರ್ಮ ಸಂರಕ್ಷಣೆಗಾಗಿ) ಸ್ವದೇಶವನ್ನು ತೊರೆದ, ತಮ್ಮ ಗೃಹಗಳಿಂದ ಹೊರಹಾಕಲ್ಪಟ್ಟ, ನನ್ನ ಮಾರ್ಗದಲ್ಲಿ ದೌರ್ಜನ್ಯಕ್ಕೆ ಗುರಿಯಾದ, ಧರ್ಮಯುದ್ಧ ಮಾಡಿದ, ವಧಿಸಲ್ಪಟ್ಟ ಜನರಿಗೆಲ್ಲ ನಿಶ್ಚಯವಾಗಿಯೂ ಅವರ ಕೆಡುಕುಗಳನ್ನು ನಾನು ತೊಡೆದು ಹಾಕುವೆನು. ಕೆಳಭಾಗದಲ್ಲಿ ಸರಿತ್ತುಗಳು ಹರಿಯುವ ಸ್ವರ್ಗಿಯ ತೋಟಗಳಲ್ಲಿ ಅವರಿಗೆ ಪ್ರವೇಶ ನೀಡುವೆನು. ಇದು ಅಲ್ಲಾಹನ ಕಡೆಯಿಂದ ಪ್ರತಿಫಲವಾಗಿದೆ. ಅತ್ಯುತ್ತಮವಾದ ಪ್ರತಿಫಲವಿರುವುದು ಅಲ್ಲಾಹನ ಬಳಿಯಲ್ಲಿದೆ.

ಸಾಕ್ಷ್ಯ ವಿಷಯಗಳಲ್ಲಿ ಪುರುಷರಿಗೆ ಸಂಬಂಧಿಸಿದ್ದರೆ ಮತ್ತು ಸ್ತ್ರೀಯರೊಡನೆ ನೇರ ಸಂಬಂಧವಿಲ್ಲದಿದ್ದರೆ ಸಾಕ್ಷ್ಯವಾಗಿ ನಿಗದಿಪಡಿಸಿದ ಪುರುಷರು ಲಭ್ಯವಾಗದಿದ್ದಲ್ಲಿ ಒಬ್ಬ ಪುರುಷನ ಜೊತೆಯಲ್ಲಿ ಇಬ್ಬರು ಸ್ತ್ರೀಯರನ್ನು ನೇಮಿಸಲಾಗಿದೆ. ಏಕೆಂದರೆ ಈ ವ್ಯವಹಾರದಲ್ಲಿ ಸ್ತ್ರೀಯರಿಗೆ ನೇರವಾದ ಸಂಬಂಧವಿಲ್ಲ. ಆದುದರಿಂದ ಸಾಕ್ಷಿ ನೀಡುವ ಸ್ತ್ರೀಯು ತನ್ನ ಸಾಕ್ಷಿ ಮರೆತರೆ ಇನ್ನೊಬ್ಬರು ಅವರನ್ನು ನೆನಪಿಸಬಹುದು. ಅಂದ ಹಾಗೆ ಇಲ್ಲಿಯೂ ಸಾಕ್ಷಿ ಒಬ್ಬ ಮಹಿಳೆಯದ್ದೇ ಆಗಿದೆ. ಕೇವಲ ಇಂತಹ ವ್ಯವಹಾರಗಳಲ್ಲಿ ಸಂಬಂಧವಿಲ್ಲದ ಕಾರಣ, ಆ ವಿಷಯ ಮರೆತು ಬಿಡುವ ಸಂಭವವಿರುವ ಕಾರಣ ಇನ್ನೊಬ್ಬ ಮಹಿಳೆಯೇ ಅವರ ಸಹಾಯಕ್ಕಾಗಿ, ಆ ಮಾತನ್ನು ನೆನಪಿಸಲು ಇಡಲಾಗಿದೆ. ಪವಿತ್ರ ಖುರ್‌ಆನ್‌ನ್ನೂ ಸಹ ಅದೇ ವಿಷಯಕ್ಕೆ ಇಂಬು ನೀಡುತ್ತಿದೆ. ಅಂದ ಹಾಗೆ ಹೇಳಿದನು. **ಯಾಅಯ್ಯುಹಲ್ಲಝೀನ ಆಮನೂ ಇಝಾ ತದಾಯನ್ತುಮ್ ಬಿದೈನಿನ್ ಇಲಾ ಅಜಲಿನ್ ಮುಸಮ್ಮಾ ಫಕ್ತಬೂಹೂ..... ವಸ್ತಶ್ಹಿದೈನಿ ಮಿರ್‍ರಿಜಾಲಿಕುಮ್, ಫಇಲ್ಲಮ್ ಯಕೂನ ರಜುಲೈನಿ ಫರಜುಲುವ್ವಮ್ರಅತಾನಿ ಮಿಮ್ಮನ್ ತರ್‌ಝೂನ ಮಿನಶ್ಶುಹದಾಇ ಇನ್ ತಝಿಲ್ಲ ಇಹ್ದಾಹುಮಾ ಫತುಝಕ್ಕಿರ ಇಹ್ದಾಹುಮಲ್ ಉಖ್ರಾ** (ಸೂರಃ ಅಲ್‌ಬಖರ-283).

ಅನುವಾದ : ಓ ವಿಶ್ವಾಸಿಗಳೇ, ನೀವು ಒಂದು ನಿರ್ದಿಷ್ಟ ಅವಧಿಗೆ ಪರಸ್ಪರ ಸಾಲದ ವ್ಯವಹಾರ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ. ನಿಮ್ಮ ಮಧ್ಯೆ ಒಬ್ಬ ಬರಹಗಾರನು ನ್ಯಾಯೋಚಿತವಾಗಿ ಬರೆಯಲಿ. ಯಾವ ಬರಹಗಾರನು ಅದನ್ನು ಬರೆಯಲು ನಿರಾಕರಿಸಬಾರದು. ಕಾರಣವೇನೆಂದರೆ, ಅಲ್ಲಾಹನು ಆತನಿಗೆ ಬರೆಯಲು ಕಲಿಸಿದ್ದಾನೆ. ಆದ್ದರಿಂದ ಆತನು ಬರೆಯಲೇಬೇಕಾಗಿದೆ. ಬರೆಯಬೇಕಾದ ವಾಕ್ಯಗಳನ್ನು (ಸಾಲಕ್ಕೆ) ಬಾಧ್ಯನಾದವನು (ಸಾಲಗ್ರಾಹಿ) ಹೇಳಿಕೊಡಬೇಕು. ಆತನು ತನ್ನ ಪ್ರಭುವಾದ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಹಾಗೂ ಅದರಿಂದ (ಸಾಲದ ಮೊತ್ತದಿಂದ) ಏನನ್ನೂ ಕಡಿಮೆಗೊಳಿಸದಿರಲಿ. ಆದರೆ (ಸಾಲಕ್ಕೆ) ಬಾಧ್ಯನಾದವನು ಅವಿವೇಕಿಂಯೋ ಬಲಹೀನನೋ ಹೇಳಿಕೊಟ್ಟು ಬರೆಯಿಸಲು ಅಸಮರ್ಥನೋ ಆಗಿದ್ದರೆ, ಆತನ ರಕ್ಷಕನು (ಆತನಿಗೋಸ್ಕರ) ನ್ಯಾಯಯುತವಾಗಿ ವಾಕ್ಯಗಳನ್ನು ಹೇಳಿ ಬರೆಯಿಸಬೇಕಾಗಿದೆ. ನಿಮ್ಮ ಪೈಕಿ ಇಬ್ಬರು ಪುರುಷರಿಲ್ಲವಾದರೆ ನೀವು ಇಷ್ಟಪಡುವ ಒಬ್ಬ ಪುರುಷ ಮತ್ತು ಇಬ್ಬರು ಸ್ತ್ರೀಯರು ಸಾಕ್ಷಿಗಳಾಗಲಿ, ಅವರೀರ್ವರಲ್ಲಿ ಒಬ್ಬಳು ಮರೆತರೆ ಇನ್ನೊಬ್ಬಳು ನೆನಪಿಸಿಕೊಳ್ಳಲಿಕ್ಕಾಗಿದೆ.

ಹದೀಸಿನಿಂದ ಸಾಬೀತಾಗಿದೆ. ಎಲ್ಲಿಯವರೆಗೆ ಮಹಿಳೆಯರ ಯಾವ ಸಮಸ್ಯೆಗೆ ನೇರವಾದ ಸಂಬಂಧವಿದೆಯೋ, ಅಲ್ಲಿ ಹುಝೂರ್(ಸ) ಮಹಿಳೆಯೊಬ್ಬಳು ವಿವಾಹಿತ ಹುಡುಗ ಮತ್ತು ಹುಡುಗಿಗೆ ಇಬ್ಬರಿಗೂ ಮೊಲೆಯುಣಿಸಿದ್ದಳು. ಅದು ಗೊತ್ತಾದ ತಕ್ಷಣ ಕೇವಲ ಒಬ್ಬ ಮಹಿಳೆಯ ಸಾಕ್ಷಿಯ ಮೇಲೆ, ಅವರನ್ನು ಪ್ರತ್ಯೇಕಗೊಳಿಸಲಾಯಿತು.

**(ಮುಂದುವರಿಯುವುದು)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹೇಗೆ ಇಟ್ಟರೆ ಅದು automatic ಆಗಿ Function ಪ್ರಾರಂಭಿಸುತ್ತದೆ. ಇಂತಹ ಒಂದು ಸೀನಿಯರ್ System ಅಳವಡಿಸಲಾಗಿದೆ. ಅದರಿಂದ Automatic ಕಾರ್ಯ ಆರಂಭವಾಗುತ್ತದೆ ಮತ್ತು ಸ್ವಚ್ಛತೆ ಕಾರ್ಯ ಮುಗಿದ ನಂತರವೇ Automatic ಆಗಿ ಹೊರಗೆ ಬರುತ್ತದೆ.

Messee Stuttgart ನಲ್ಲಿ ಹತ್ತು ದೊಡ್ಡ ಸಭಾಂಗಣಗಳಿವೆ. ಅದರಲ್ಲಿ ಪುರುಷರ ಮಹಿಳೆಯರ ಜಲ್ಸಗಾಹ್ ಮತ್ತು ವಸತಿ ಭಾಗಗಳು ಮತ್ತು ಊಟ ಮಾಡಿಸುವ ವ್ಯವಸ್ಥೆ ಅಲ್ಲದೇ ವಿವಿಧ ವಿಭಾಗಗಳ ಕಚೇರಿಗಳು ಸಹ ಸ್ಥಾಪಿಸಲಾಗಿದೆ.

ಸಭಾಂಗಣ ಸಂಖ್ಯೆ 1 : ಇದರಲ್ಲಿ ಪುರುಷರ ಜಲ್ಸಗಾಹ್ ಇದೆ.

ಸಭಾಂಗಣ ಸಂಖ್ಯೆ 2 : ಇದರಲ್ಲಿ ಇತಿಹಾಸ ವಿಭಾಗದ ವಸ್ತು ಪ್ರದರ್ಶನವಿದೆ.

ತಬ್ಲೀಗ್ನ ವಿಭಾಗದ ವಸ್ತು ಪ್ರದರ್ಶನ ಇದೆ. ಖುರ್‌ಆನ್ ಕೇಳಿಗ್ರಾಫಿನ ವಸ್ತು ಪ್ರದರ್ಶನ ಇದೆ. ವಿದೇಶಿ ಅತಿಥಿಗಳಿಗಾಗಿ ಮೀಸಲಾತಿ ವಿಭಾಗದನ್ವಯ ಆತಿಥ್ಯದ ವ್ಯವಸ್ಥೆಯು ಇದೇ ಸಭಾಂಗಣದಲ್ಲಿ ಮಾಡಲಾಗಿದೆ. ಹುಝೂರ್ ಅನ್ವರ್(ಅತಬಅ) ಅವರ ಜರ್ಮನ್ ಅತಿಥಿಗಳೊಡನೆ ಭಾಷಣ ಇದೇ ಸಭಾಂಗಣದ ಒಂದು ಭಾಗದಲ್ಲಾಗುವುದು.

ಸಭಾಂಗಣ ಸಂಖ್ಯೆ 3 : ಪುರುಷರಿಗಾಗಿ ಊಟ ಬಲಸುವ ವ್ಯವಸ್ಥೆ ಇದೇ ಸಭಾಂಗಣದಲ್ಲಿದೆ.

ಸಭಾಂಗಣ ಸಂಖ್ಯೆ 4 : ಇದರಲ್ಲಿ ಪುರುಷರಿಗೆ ವಸತಿಯ ಏರ್ಪಾಡು ಮಾಡಲಾಗಿದೆ.

ಸಭಾಂಗಣ ಸಂಖ್ಯೆ 5 : ಇದರ ಒಂದು ಭಾಗ ಪುರುಷರ ಪೇಟೆಗೋಸ್ಕರ ವಿಶಿಷ್ಟಗೊಳಿಸಲಾಗಿದೆ. ಅದಲ್ಲದೆ ವಿವಿಧ ವಿಭಾಗಗಳಾದ ಬುಕ್‌ಸ್ಟಾಲ್, ರಿಶ್ತನಾತ, Review of Religious, ಅಲ್-ಫಝಲ್, ನೂರ್‌ನ್ಯಾಗ್ಜೀನ್, IHRC, ಜಾಮಿಯಾ ಅಹ್ಮದಿಯಾ, ತಾಲೀಮುಲ್ ಖುರ್‌ಆನ್ ವಖ್ಫೆ ಆರ್ಝಿ, ವಖ್ಫ್ ನೌ, ತಾಲೀಮ್, ವಸಾಯ, ವಾಣಿಜ್ಯಗಳನ್ನು ಸ್ಥಾಪಿಸಲಾಗಿದೆ.

ಸಭಾಂಗಣ ಸಂಖ್ಯೆ 6: ಈ ಸಭಾಂಗಣಕ್ಕೆ ಎರಡು ಭಾಗಗಳನ್ನಾಗಿ ವಿಂಗಡಿಸಿ, ಒಂದು ಭಾಗ ಪುರುಷರಿಗಾಗಿ, ಇನ್ನೊಂದು ಭಾಗ ಸ್ತ್ರೀಯರ ವಸತಿಗಾಗಿ ಒದಗಿಸಲಾಗಿದೆ.

ಸಭಾಂಗಣ ಸಂಖ್ಯೆ 7 : ಇದರಲ್ಲಿ ಮಹಿಳೆಯರ ಜಲ್ಸಗಾಹ್ ಇದೆ.

ಸಭಾಂಗಣ ಸಂಖ್ಯೆ 8 : ಇದರಲ್ಲಿ ಮಹಿಳೆಯರಿಗಾಗಿ ಊಟದ ವ್ಯವಸ್ಥೆ ಮಾಡಲಾಗಿದೆ.

ಸಭಾಂಗಣ ಸಂಖ್ಯೆ 9 : ಇದರಲ್ಲಿ ಒಂದು ಭಾಗ ಮಕ್ಕಳು, ಮಹಿಳೆಯರಿಗೆ ಉಪಯೋಗಿಸಲಾಗಿದೆ, ಮತ್ತೊಂದು ಭಾಗದಲ್ಲಿ ಮಹಿಳೆಯರಿಗೆ ಟಚಿಡಿಇುಟಿರ ವ್ಯವಸ್ಥೆ ಮಾಡಲಾಗಿದೆ.

ಸಭಾಂಗಣ ಸಂಖ್ಯೆ 10: ಇದು ಲಜ್ನ (ಮಹಿಳೆಯರ) ವಸತಿಗಾಗಿ ವಿಶಿಷ್ಟಗೊಳಿಸಲಾಗಿದೆ.

ಇವುಗಳಲ್ಲದೇ ವಿವಿಧ ಸ್ಥಳಗಳಲ್ಲಿ ಕೆಳಗೆ ನಮುದಿತ ಕಚೇರಿಗಳನ್ನು ಸ್ಥಾಪಿಸಲಾಗಿದೆ. ದಫ್ತರ್ ಜಲ್ಸ ಸಾಲಾನ, Reception, Decoration, ವಸತಿ, ಆತಿಥ್ಯ, Transport, Audio, Video, ಸಾಮಾಜಿಕ ಮಾಧ್ಯಮ, Communication, IT ವಿಭಾಗ, Registration, ಶಿಸ್ತುಪಾಲನೆ, ದಫ್‌ತರ್ ಜಲ್ಸಗಾಹ್, ನೀರು ಸರಬರಾಜು, ರೇಡಿಯೋ, ದಫತರ್ ಉಮಾಮಿ, ದಫತರ್ ಖಿದಮತ್ ಖಲ್ಖ್, ಧ್ವಜ ಸಂರಕ್ಷಣೆ, ತರಬೇತಿ ವಿಭಾಗ, ಕಡಿಜ ವಿಭಾಗ.

ಈ Complex ವೀಕ್ಷಣೆ ಮತ್ತು ಸಾಮೂಹಿಕ Photo ನಂತರ ಹುಝೂರ್ ಅನ್ವರ್ ಲಜ್ನ (ಮಹಿಳೆಯರ) ಜಲ್ಸಗಾಹ್ ವ್ಯವಸ್ಥೆ ಪರಿಶೀಲಿಸಲು ಹೊರಟರು ಮತ್ತು ಲಜ್ನಗಳ ವ್ಯವಸ್ಥೆಯನ್ನು ವೀಕ್ಷಿಸಿದರು. ನಂತರ ಲಜ್ನ ಮತ್ತು ವ್ಯವಸ್ಥಾಪಕರೊಡನೆ ವಿವಿಧ ಕಾರ್ಯಗಳ ಬಗ್ಗೆ ವಿಚಾರಿಸಿದರು.

ಇಲ್ಲಿಯ ವೀಕ್ಷಣೆಯ ನಂತರ ಹುಝೂರ್ ಅನ್ವರ್(ಅತಬಅ) ಜಲ್ಸಗಾಹ್ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಜಲ್ಸ ಸಾಲಾನ ಪೈಕಿ ಕರ್ತವ್ಯ ಪಾಲಕರ ಉದ್ಘಾಟನಾ ಸಮಾರಂಭವಿತ್ತು. ಎಲ್ಲಾ ವ್ಯವಸ್ಥಾಪಕರು, ತಮ್ಮ ಸಹಾಯಕರೊಂದಿಗೆ ಶಿಸ್ತುಬದ್ಧವಾಗಿ ಕುಳಿತಿದ್ದರು.

ಅಫ್‌ಸರ್ ಜಲ್ಸ ಸಾಲಾನ, ಅಫ್‌ಸರ್ ಜಲ್ಸಗಾಹ್ ಮತ್ತು ಅಫ್‌ಸರ್ ಖಿದ್‌ಮತ್ ಖಲ್ಖ್ ಹೊರತಾಗಿ" ನಾಯಿಬ್ ಅಫ್‌ಸರಾನ್‌ನ ಸಂಖ್ಯೆ 15 ಆಗಿದೆ. ನಾಝಿಮೀನ್ ಸಂಖ್ಯೆ 83, ನಾಯಿಬ್ ನಾಝಿಮೀನಗಳ ಸಂಖ್ಯೆ 296, ಮುನ್‌ತಿಝಿಮೀನ್‌ಗಳ ಸಂಖ್ಯೆ 504, ಸಹಾಯಕ ಸಂಖ್ಯೆ: 669, ಈ ರೀತಿ ಒಟ್ಟು 7589 ಪುರುಷರು ಮತ್ತು ಮಕ್ಕಳು (ಅತ್‌ಫಾಲ್) ಕರ್ತವ್ಯವನ್ನು ಪಾಲಿಸುತ್ತಿದ್ದರು.

ಸಮಾರಂಭದ ಪ್ರಾರಂಭ 9.5 ಕ್ಕೆ ಪವಿತ್ರ ಖುರ್‌ಆನ್ ಪಾರಾಯಣದೊಂದಿಗೆ ಆಯಿತು. ಅದನ್ನು ಹಾಫಿಝ್ ಅವೇಸ್ ಅಹ್ಮದ್ ಖಮರ್ ಸಹಿಬ್ ನೆರವೇರಿಸಿದರು. ಅದರ ಉರ್ದು ಅನುವಾದ ಇಹ್‌ಸಾನ್ ಅಹ್ಮದ್ ಸಾಹಿಬ್ ಪ್ರಸ್ತುತಪಡಿಸಿದರು. ನಂತರ 9.10 ಕ್ಕೆ ಹುಝೂರ್ ಅನ್ವರ್(ಅತಬಅ) ತಮ್ಮ ಭಾಷಣ ಪ್ರಾರಂಭಿಸಿದರು.

**ಹುಝೂರ್ ಅನ್ವರ್(ಅತಬಅ) ರವರ ಭಾಷಣ**

**ಕರ್ತವ್ಯಪಾಲಕರ ಸಭೆ ಜಲ್ಸ ಸಾಲಾನ ಜರ್ಮನಿ 2023**

ತಶ್ಹೀದ್ ನಂತರ ಹುಝೂರ್ ಅನ್ವರ್(ಅತಬಅ) ಹೇಳಿದರು: ಅಲ್ಲಾಹನ ತುಂಬಾ ಕೃಪೆ ಉಪಕಾರ ನಮ್ಮ ಮೇಲಿದೆ. ಒಂದು ದೀರ್ಘ ಅವಧಿಯ ನಂತರ ಜರ್ಮನಕಿ ಜಮಾಅತ್‌ಗೆ ಮತ್ತೊಮ್ಮೆ ವಿಶಾಲ ನೆಲೆಯಲ್ಲಿ ಜಲ್ಸ ಆಚರಿಸುವ ಭಾಗ್ಯ ದೊರೆಯುತ್ತದೆ. ಇಲ್ಲಿ ಸ್ಥಳದ ಸಮಸ್ಯೆಯಿತು. ಆದರೆ ಅಲ್ಲಾಹನು ಕರುಣಿಸಿದನು ಮತ್ತು ಒಂದು ಸ್ಥಳ ದೊರೆಯಿತು. ಮುಂದೆಯೂ ಭರವಸೆ ಇದೆ. ಜರ್ಮನಿ ಜಮಾಅತ್ ಪ್ರಯತ್ನಪಡುತ್ತದೆ ಎಂದು. ಆಗ ಇನ್ನೂ ಅಧಿಕ ಸವಲತ್ತಿನಿಂದ ಮತ್ತು ಸ್ವತಂತ್ರ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಬಹುದಾಗಿದೆ. ಆದರೆ ಗೇಗೂ ಅಲ್ಲಾಹನು ಜಾಗ ಒದಗಿಸಿಕೊಟ್ಟಿದ್ದಾನೆ. ತುಂಬಾ ವಿಶಾಲವಾದ ಕ್ಷೇತ್ರವಿದೆ. ಕ್ಷೇತ್ರವು ವಿಶಾಲವಾಗಿದ್ದರಿಂದ ಕರ್ತವ್ಯಪಾಲಕರ ಜವಾಬ್ದಾರಿಯು ಹೆಚ್ಚುತ್ತದೆ. ವಿಶೇಷವಾಗಿ ರಕ್ಷಣಾ ಸಿಬ್ಬಂದಿ ಅವರಿಗೆ ಇಷ್ಟೊಂದು ವಿಶಾಲ ಕ್ಷೇತ್ರ ನೋಡಿಕೊಳ್ಳಬೇಕು ಎಂದರೆ ಕಷ್ಟಸಾಧ್ಯವಾಗುತ್ತದೆ. ಜಾಗ್ರತೆವಹಿಸಬೇಕಾಗುತ್ತದೆ. ಇತ್ತೀಚೆಗೆ ಮುಸ್ಲಿಮರ ಬಗ್ಗೆ ಜನರ ಭಾವನೆಗಳು ಸರಿಯಿಲ್ಲ. ಆ ನೆಲೆಯಲ್ಲೂ ಸಮಸ್ಯೆಯಾಗಬಹುದು. ಇಲ್ಲಿ ಇರುವ ಮುಸ್ಲಿಮರು ನಮ್ಮ ಜಮಾಅತಿಗೆ ವಿರೋಧವಿದೆಯಾದರೂ ಅವರಿಂದಲೂ ಸಮಸ್ಯೆ ಬರಬಹುದು. ಆದ್ದರಿಂದ ರಕ್ಷಣೆ ಕಾರ್ಯ ಮಾಡುವವರು ತುಂಬಾ ಜಾಗರೂಕತೆಯಿಂದ ಕೆಲಸ ನಿರ್ವಹಿಸಬೇಕಾಗಿದೆ.

ಬೇರೆ ವಿಷಯವೇನೆಂದರೆ ತುಂಬಾ ವಿಶಾಲ ರೀತಿಯಲ್ಲಿ ನಿಮಗೆ ಅತಿಥಿ ಸತ್ಕಾರ ಮಾಡುವ ಅವಕಾಶ ದೊರೆಯುತ್ತದೆ. ಊಟ ತಯಾರಿಸುವವರು ಊಟ ತಯಾರಿಸಬಹುದು. ಅದರಲ್ಲಿ ಜಿಪುಣತೆ ಮಾಡಲಿಕ್ಕಿಲ್ಲ ಎಂಬ ಭರವಸೆ ನನಗಿದೆ. ಅಂದಾಜಿನ ಪ್ರಕಾರ ಊಟ ಮಾಡಬಹುದು ಮತ್ತು ಪ್ರತಿಯೊಬ್ಬರಿಗೆ ಊಟ ಸಿಗುವಂತಾಗಬೇಕಾಗಿದೆ. ಊಟ ಬಳಸುವವರ ನೀತಿವಂತರಾಗಿ ಪ್ರತಿಯೊಬ್ಬರಿಗೆ ಸಂತುಷ್ಟಗೊಳಿಸುವ ರೀತಿಯಲ್ಲಿ ಸೇವೆ ಮಾಡಬೇಕು. ಯಾವುದೇ ರೀತಿಯಲ್ಲಿ ತೊಂದರೆ ಆಗದಂತೆ ನೋಡಿಕೊಳ್ಳಬೇಕು.

ಹುಝೂರ್ ಅನ್ವರ್(ಅತಬಅ) ಹೇಳಿದರು. ಯು.ಕೆ ಜಲ್ಸದಲ್ಲಿ ನಾನು ಕಾರ್ಯಕರ್ತರಿಗೆ ಹೇಳಿದ್ದೆ, ಪ್ರತಿಯೊಬ್ಬರು ಸದಾ ಮುಗುಳ್ನಗುವಿನೊಂದಿಗೆ ಸೇವೆ ಮಾಡಬೇಕು, ಅದೇ ಮಾತು ನಿಮಗೂ ಹೇಳುತ್ತಿದ್ದೇನೆ. ಕೆಲವೊಮ್ಮೆ ಶಾಂತಿ ಭಂಗವಾಗುವಂತಹ ಪರಿಸ್ಥಿತಿ ಉಂಟಾಗುತ್ತದೆ. ಆದರೆ ಇಂತಹ ಪರಿಸ್ಥಿತಿಯಲ್ಲಿ ತುಂಬಾ ತಾಳ್ಮೆ ಸಹನೆ ವಹಿಸಬೇಕು. ಹೀಗೆ ಪರಿಸ್ಥಿತಿಯನ್ನು ನಿಭಾಯಿಸಬಹುದಾಗಿದೆ.

ಹುಝೂರ್ ಅನ್ವರ್(ಅತಬಅ) ಹೇಳಿದರು. ರಕ್ಷಣಾ ವ್ಯವಸ್ಥೆ ಬಗ್ಗೆ ಮೊದಲೇ ಮಾತನಾಡಿದ್ದೆ, ಈಗ ಮಹಿಳೆಯರ ಕುರಿತು ಹೇಳಬಯಸುತ್ತೇನೆ, ಕೆಲವೊಮ್ಮೆ ಬರುವ ಮಹಿಳೆಯರು, ಕೆಲವು ಪುರುಷರು ಆತಂಕ ಒಡ್ಡುತ್ತಾರೆ, ಇಲ್ಲಿ ತುಂಬಾ ವಿನಯದಿಂದ ವರ್ತಿಸಬೇಕಾಗುತ್ತದೆ. ಬೈತುಸ್ಸುಬೂಹ್‌ನಲ್ಲಿ ನಮಾಝ್ ಮಾಡುವಾಗ ಮತ್ತು ಭೇಟಿ ಮಾಡುವ ನಡುವೆ ಜನರು ಬರುತ್ತಾರೆ, ಅಲ್ಲಿ ತಪಾಸಣೆ ನಡೆದಿತ್ತು, ಒಬ್ಬಾಕೆಯದು ದೂರು ಬಂತು. ನನಗೆ ದೂರಲಾಯಿತು. ಮತ್ತು ತಪಾಸಣೆ ಮಾಡುವವರು ನನ್ನೊಡನೆ ಸರಿಯಾಗಿ ವರ್ತಿಸಲಿಲ್ಲ. ಈ ಬಗ್ಗೆ ಗಮನ ನೀಡಬೇಕು. ಜಾಗ್ರತೆವಹಿಸಬೇಕು. ತಮ್ಮ ಕಾರ್ಯದಲ್ಲಿ ಪೂರ್ಣ ರೀತಿಯಲ್ಲಿ ಗಮನಹರಿಸಬೇಕು. ಆದರೆ ಅದರ ಜೊತೆಯಲ್ಲಿ ಉತ್ತಮ ನಡತೆಯು ಹೊಂದಿರಬೇಕು. ತಪಾಸಣೆ ಮಾಡಿದರು. ಮೃದು ರೀತಿಯಲ್ಲಿ ಪ್ರೀತಿ ಪ್ರೇಮದಿಮದ ಯಾರಿಗೂ ದೂರುಕೊಡುವ ಅವಕಾಶ ನೀಡಬಾರದು.

ಹುಝೂರ್ ಅನ್ವರ್(ಅತಬಅ) ನುಡಿದರು:- ಅಲ್ಲಾಹನ ಅನುಗ್ರಹದಿಂದ ಜಲ್ಸಾದ ಸಿದ್ಧತೆ ಏನಾಗಿದೆ. ಅದು ಸಾಬೀತುಗೊಳಿಸಿದೆ. ನಾಲ್ಕು ವರ್ಷದ ಅವಧಿಯ ನಂತರ ಬಹುಶಃ ಇಷ್ಟು ಉತ್ತಮ ರೀತಿಯಲ್ಲಿ ಸಿದ್ಧತೆ ಆಗಲಿಕ್ಕಿಲ್ಲ ಎಂಬ ಭಯವಿತ್ತು. ಅದು ದೂರವಾಗಿದೆ ಮತ್ತು ಕಾರ್ಯಕರ್ತರಾದ ಖುದ್ದಾಂ ಅನ್ಸಾರ್ ಮತ್ತು ಜಮಾಅತಿನ ಸದಸ್ಯರು ಸೇರಿ ಜಲ್ಸಾ ಗಾಹ್‌ವನ್ನು ಸಿದ್ಧಗೊಳಿಸಿದ್ದಾರೆ. ಅಲ್ಲಾಹನ ಅನುಗ್ರಹದಿಂದ ನೀವು ತನ್ನ ಕಾರ್ಯವನ್ನು ಮರೆತಿಲ್ಲ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಮುಂದೆ ಯುವಕರಾಗುವ ಈ ಮಕ್ಕಳು ನಿಮ್ಮಿಂದ ಕಲಿಯಬಹುದಾಗಿದೆ. ಇನ್ಶಾ ಅಲ್ಲಾಹ್ ತಾಲಾ,

**(ಮುಂದುವರಿಯುವುದು)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮುಯುಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರಿವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿಮೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9760468663 (ವ್ಯವಸ್ಥಾಪಕರು)

**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಇನ್ಸಾನಿಯತ್ ಝಿಂದಾಬಾದ್, ಮಾನವೀಯತೆ ಚಿರಕಾಲ ಬಾಳಲಿ**

## ಜಲ್ಸ ಸಾಲಾನ ಖಾದಿಯಾನ್

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್. **(ಮಜ್‌ಮೂಅ ಇಶ್ತಿಹಾರಾತ್ ಸಂಪುಟ–1 ಪುಟ 341–342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯಿದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 17 October 2024, Issue No. 42

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಷ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ–41ರ ಉಳಿದ ಭಾಗ ಮುಂದುವರಿಸಲಾಗಿದೆ)*

26 ಆಗಸ್ಟ್–ಶನಿವಾರ ದಿನದಂದು 16 ಜನರ ತಂಡ ಇಸ್ಲಾಮಾಬಾದ್ ಯು.ಕೆ ಯಿಂದ ಹೊರಟಿತು. ಮಸ್ಜಿದ್ ಮುಭಾರಕ್ ಇಸ್ಲಾಮಾಬಾದ್‌ನಿಂದ ಫಜರ್ ನಮಾಝ್ ನಂತರ ಹುಝೂರ್ ಅನ್ವರ್(ಅತಬಅ) ಪ್ರೀತಿಯಿಂದ ಘೋಷಣೆಯೊಂದಿಗೆ ತಂಡಕ್ಕೆ ಬೀಳ್ಕೊಟ್ಟರು. ಹಾಫಿಝ್ ಈಜಾಝ್ ಅಹ್ಮದ್ ತಾಹಿರ್ ಸಾಹಿಬ್ ತಂಡದ ನಾಯಕರಾಗಿದ್ದರು. ಅವರು ಮಜ್‌ಲಿಸ್ ಅನಸುರುಲ್ಲಾ ಯು.ಕೆ ಯ ಸೈಕಲಿಂಗ್ ಕ್ಲಬ್ (Cycling club) ನ ಚೇರ್ಮನ್ ಸಹ ಆಗಿದ್ದರು. Dover ಯಿಂದ Fary ಮೂಲಕ ಪ್ರಯಾಣ ಬೆಳೆಸಿ Dunkirk ತಲುಪಿದರು. ನಗರ Ostende ತಲುಪಿದರು. ಮತ್ತು ರಾತ್ರಿ ಜಮಾಅತ್‌ನ ಸೆಂಟರ್‌ನಲ್ಲಿ ತಂಗಿದರು. ಮತ್ತೆ 27–ಆಗಸ್ಟ್ ರಂದು 110 ಕಿ.ಮೀ, 28, ಆಗಸ್ಟ್ ರಂದು 167 ಕಿ.ಮೀ, 29, ಆಗಸ್ಟ್ ರಂದು 149 ಕಿ.ಮೀ ಮತ್ತು 30–ಆಗಸ್ಟ್ ರಂದು 181 ಕಿ.ಮೀ ಪ್ರಯಾಣ ಮಾಡಿದರು. ಮತ್ತು ಕೊನೆಯ ದಿನ 31–ಆಗಸ್ಟ್‌ರಂದು mannheim ಜರ್ಮನಿಯಿಂದ ಹೊರಟು 129 ಕಿ.ಮೀ ದೂರ ಕ್ರಮಿಸಿ Stuttgart ಜಲ್ಸಾ ಸ್ಥಳಕ್ಕೆ ತಲುಪಿದರು. ಈಗ್ಗೆ ಒಟ್ಟು 842 ಕಿ.ಮೀ ದೂರದ ಪ್ರಯಾಣ ಮಾಡಿದರು. ಈ ಪ್ರಯಾಣದಲ್ಲಿ ಭಾಗವಹಿಸಿದ 3 ಅನ್‌ಸಾರರ ವಯಸ್ಸು 60 ಕ್ಕೆ ಸಮೀಪವಿತ್ತು.

ಆನಂತರ ಹುಝೂರ್ ಅನ್ವರ್(ಅತಬಅ) ಇತಿಹಾಸ ವಿಭಾಗದನ್ವಯ ಏರ್ಪಡಿಸಿದ ವಸ್ತು ಪ್ರದರ್ಶನ ವೀಕ್ಷಿಸಿದರು. ವಸ್ತು ಪ್ರದರ್ಶನದ ಭೇಟಿಯ ನಡುವೆ ಹುಝೂರ್ ಅನ್ವರ್(ಅತಬಅ) 2 ವೆಬ್‌ಸೈಟ್‌ನ್ನು ಉದ್ಘಾಟಿಸಿದರು. ಒಂದು ವೆಬ್‌ಸೈಟ್ ಜರ್ಮನಿಯ ಮಾಸಿಕ ಪತ್ರಿಕೆ ಅಹ್ಮದಿಯಾ ಆಗಿತ್ತು. ಎರಡನೇ ವೆಬ್‌ಸೈಟ್ ಅಹಮದಿಯ ಜಮಾಅತ್ ಜರ್ಮನಿಯ ಇತಿಹಾಸ ವಿಭಾಗಕ್ಕೆ ಸಂಬಂಧಿಸಿದ್ದಾಗಿತ್ತು. ವಸ್ತು ಪ್ರದರ್ಶನದಲ್ಲಿ ವಿವಿಧ ರೀತಿಯ Flaxess ಹಾಕಲಾಗಿತ್ತು. ಅದರಲ್ಲಿ ಹಝ್‌ರತ್ ಅಖದ್ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರ ಕಾಲದಿಂದ ಹಿಡಿದು ಪಂಚಮ ಖಲೀಫರ ಕಾಲದವರೆಗಿನ ಅಹ್ಮದಿಯಾ ಜಮಾಅತ್ ಜರ್ಮನಿಯ ಇತಿಹಾಸದ ವಿವಿಧ ಅಧ್ಯಾಯಗಳನ್ನು ಸರಳ ಭಾಷೆಯಲ್ಲಿ ಪ್ರಸ್ತುತಪಡಿಸಲಾಗಿತ್ತು. ಈ ಫ್ಲಾಕ್ಸೆಸ್‌ಗಳು ಜರ್ಮನ್ ಮತ್ತು ಇಂಗ್ಲೀಷ್ ಎರಡೂ ಭಾಷೆಗಳಲ್ಲಿದ್ದರು.

ಈ ವಸ್ತು ಪ್ರದರ್ಶನದಲ್ಲಿ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರು 1885 ರಲ್ಲಿ ವಿವಿಧ ಸಮುದಾಯಗಳ ಮುಖಂಡರಿಗೆ ಮತ್ತು ಅಮೀರರಿಗೆ ಮತ್ತು ದೇಶದ ಮುಖಂಡರಿಗೆ ಬರೆದ ಪತ್ರಗಳ ವಿವರವು ಇತ್ತು. ಅದರ ಪರಿಣಾಮವಾಗಿ ಜರ್ಮನಿಯಿಂದ ಹೊರಟ ಬಂಧುಗಳು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾವ್ ಅವರನ್ನು ಸಂಪರ್ಕಿಸಿದಿದರು. ಅದೇ ರೀತಿ 1923 ರಲ್ಲಿ ನಿರ್ಮಾಣಗೊಳ್ಳಲಾಗದ ಮಸೀದಿ ಬರ್ಲಿನ್ ಮತ್ತು, ಪ್ರಾರಂಭಿಕ ಮಸೀದಿಗಳಲ್ಲಿ ಮಸ್ಜಿದ್ ಫಜಲಿ ಉಮರ್ ಹೆಂಬರ್ಗ್ ಮತ್ತು ಮಸ್ಜಿದ್ ನೂರ್ ಫ್ರೆಂಕ್‌ಫರ್ಟ್‌ನ ಒಂದು ಫ್ಲ್ಯಾಕ್ಸ್ ಮೇಲೆ ಹಾಕಲಾಗಿತ್ತು. ಅಲ್ಲದೇ ಈ Flaxes ನಲ್ಲಿ ಹಝ್‌ರತ್ ಖಲೀಫತುಲ್ ಮುಖುಜಿ ಸಾನಿ(ಡಿ) ಹಝ್‌ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್), ಹಝ್‌ರತ್ ಖಲೀಫತುಲ್ ಮಸೀಹ್ ರಾಬೀ(ರಹ್) ಮತ್ತು ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರುಗಳ ಜರ್ಮನಿ ಪ್ರವಾಸವನ್ನು ಅತ್ಯಂತ ಮನೋಹರಕರ ರಿತಿಯಲ್ಲಿ ಪ್ರಸ್ತುತಪಡಿಸಲಾಗಿತ್ತು.

ಅನಂತರ ಹುಝೂರ್ ಅನ್ವರ್(ಅತಬಅ) ತಬ್ಲೀಗ್ಹ್ ವಿಭಾಗದಿಂದ ಇಸ್ಲಾಂ ಧರ್ಮದ ಕುರಿತಾಗಿ ಹಾಗೂ ವಿವಿಧ ಭಾಷೆಯ ಅಹ್ಮದಿಯಾ ಸಾಹಿತ್ಯಗಳ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು.

ತುರ್ಕಿ, ಫಾರ್ಸಿ, Balkan ಭಾಷೆ, ಬಾಂಗ್ಲಾ, ರಶಿಯನ್, ಚೀನಿ ಮತ್ತು ವಿವಿಧ ಆಫ್ರಿಕನ್ ಭಾಷೆಗಳ ಸಾಹಿತ್ಯ ತುಂಬಾ ಸುಂದರವಾಗಿ ಪ್ರದರ್ಶಿಸಲಾಗಿತ್ತು.

ಇಸ್ಲಾಂ ಧರ್ಮದ ಕುರಿತು ವಸ್ತು ಪ್ರದರ್ಶನದಲ್ಲಿ ಇಸ್ಲಾಮಿ ವಿಶ್ವಾಸದ ಮೂಲಭೂತ ತತ್ವಗಳನ್ನು ವಿವಿಧ ಫ್ಲ್ಯಾಕ್ಸ್‌ನಲ್ಲಿ ಹಾಕಲಾಗಿತ್ತು. ಅದರಲ್ಲಿ ಅಲ್ಲಾಹುತಾಲಾ, ಪವಿತ್ರ ಖುರ್‌ಆನ್, ಪವಿತ್ರ ಪ್ರವಾದಿ(ಸ) ಮತ್ತು ಅವರ ಕುರಿತು ವಿವಿಧ ಚಿಂತಕರ ಅಭಿಪ್ರಾಯಗಳು, ಇಸ್ಲಾಂ ಮತ್ತು ವಿಜ್ಞಾನ, ಇಸ್ಲಾಮಿನ ತತ್ವಗಳು, ಸಿಹಾಸತ್ತ (ಹದೀಸ್), ಜಿಹಾದ್, ಹಝ್‌ರತ್ ಅಖದಸ್ ಮಸೀಹ್ ಮೌಊದ್(ಅ), ಸೂರ್ಯ ಚಂದ್ರ ಗ್ರಹಣ, ಹತ್ತು ಬೈಅತ್ತಿನ ಶರತ್ತುಗಳು, ಖಿಲಾಪತ್ ಅಹ್ಮದಿಯಾ, ಖಾದಿಯಾನ್, ಮಿನಾರತುಲ್ ಮಸೀಹ್, ಹುಝೂರ್ ಅನ್ವರ್(ಅತಬಅ) ಅವರ ಹನ್ನೆರಡು ಸಂದೇಶಗಳು ಇತ್ಯಾದಿ ಶಾಮೀಲಾಗಿದ್ದವು.

ಈ Exhibition ನಲ್ಲಿ ಖುರ್‌ಆನ್‌ನ ವಿವಿಧ ಭಾಷೆಗಳ ಅನುವಾದ ಸಹ ಪ್ರದರ್ಶಿಸಲಾಗಿತ್ತು. ಹಾಗೂ 2020 ರಿಮದ ಇಲ್ಲಿಯವರೆಗಿನ ತಬ್ಲೀಗ್ಹ್ ಪ್ರಯತ್ನಗಳ ಅಂಕೆ ಸಂಖ್ಯೆಗಳನ್ನು ಪ್ರಸ್ತುತಪಡಿಸಲಾಗಿತ್ತು.

ವಸ್ತು ಪ್ರದರ್ಶನ ವೀಕ್ಷಣೆಯ ನಂತರ ಹುಝೂರ್ ಅನ್ವರ್(ಅತಬಅ) ಹೊರಗೆ ಬಂದಾಗ ಒಂದು ಸ್ಥಳದಲ್ಲಿ ಆಫ್ರೀಕನ್ ಬಂಧುಗಳು ತಮ್ಮ ವಿಶಿಷ್ಠ ಶೈಲಿಯಲ್ಲಿ, **'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ ರಸೂಲುಲ್ಲಾಹ್"** ಪಠಿಸುತ್ತಿದ್ದರು, ಮತ್ತು ಎತ್ತರದ ಧ್ವನಿಯಲ್ಲಿ **"ಇನ್ನಿ ಮಅಕ ಯಾ ಮಸ್ರೂರ್"** ಹೇಳುತ್ತಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಅವರ ಬಳಿ ಸ್ವಲ್ಪ ಹೊತ್ತು ಕಳೆದರು ಮತ್ತು ಅವರಿಗೆ ಹೇಳಿದರು. ನೀವು ಯಾವ ದೇಶದಿಂದ ಬಂದಿರುವಿರಿ, ಆಗ ಅವರು ಹೇಳಿದರು. ಗಿನಿಬಿಸಾವುದಿಂದ.

ಅನಂತರ ಹುಝೂರ್ ಅನ್ವರ್(ಅತಬಅ) ಉಪಹಾರ ಗೃಹಕ್ಕೆ ಬಂದರು, ಒಂದು ಭಾಗದಲ್ಲಿ ವಿವಿಧ ಧವಸ ಧಾನ್ಯಗಳು ಮತ್ತು ಇತರೆ ಸಾಮಾನುಗಳು ಸಂಗ್ರಹಿಸಲಾಗಿತ್ತು. ಹುಝೂರ್ ಇದನ್ನು ನೋಡುತ್ತಾ ಉಪಹಾರ ಗೃಹಕ್ಕೆ ತೆರಳಿದರು. ಸಾಯಂಕಾಲದ ಊಟಕ್ಕಾಗಿ ಬೇಳೆ ಮತ್ತು ಮಾಂಸ ಬಟಾಟೊ ತಯಾರಿಸಲಾಗಿತ್ತು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಬೆಂದಿದ ಬಟಾಟೊ ಮಾಂಸದ ಒಂದು ತುತ್ತು ಸೇವಿಸಿ ನೋಡಿದರು. ಇದು ಸರಿಯಾಗಿದೆಯೇ ಇಲ್ಲವೋ ಎಂದು ಪರೀಕ್ಷಿಸಿದರು. ಹುಝೂರ್ ಅನ್ವರ್(ಅತಬಅ) ಬೇಳೆಯನ್ನು ಸಹ ಪರೀಕ್ಷಿಸಿದರು ಮತ್ತು ಊಟದ ವ್ಯವಸ್ಥೆ ಉತ್ತಮವಾಗಿದೆಯೇ ಇಲ್ಲ ಎಂಬುದನ್ನು ಪರೀಕ್ಷಿಸಿದರು.

ಅನಂತರ ಹುಝೂರ್ ಅನ್ವರ್(ಅತಬಅ) ವಿವಿಧ ದೇಶಗಳಿಂದ ಬಂದ ಅತಿಥಿಗಳ ವ್ಯವಸ್ಥೆ ಅವರ ಸ್ವಭಾವ ಮತ್ತು ಅಗತ್ಯಗಳ ಪ್ರಕಾರ ಆಗಿದೆಯೇ ಇಲ್ಲ ಎಂಬುದನ್ನು ಹುಝೂರ್ ಅನ್ವರ್(ಅತಬಅ) ವೀಕ್ಷಿಸಿದರು.

ಉಪಹಾರ ಗೃಹದ ಕಾರ್ಯಕರ್ತರು ಒಂದು ದೊಡ್ಡ ಗಾತ್ರದ ಕೇಕ್ ತಯಾರಿಸಿದ್ದರು. ಹುಝೂರ್ ಅನ್ವರ್(ಅತಬಅ) ಪ್ರೀತಿಪೂರ್ವಕವಾಗಿ ಕಾರ್ಯಕರ್ತರಿಗಾಗಿ ಆ ಕೇಕ್‌ಅನ್ನು ಕತ್ತರಿಸಿಕೊಟ್ಟರು. ಅನಂತರ ಕಾರ್ಯಕರ್ತರೆಲ್ಲರೂ ಸೇರಿ ಹುಝೂರ್ ಅನ್ವರ್(ಅತಬಅ)ರ ಜೊತೆ ಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು.

ಅತಿಥಿ ಗೃಹದ ಹೊರಗೆ ವಾಷಿಂಗ್ ಮೆಷಿನ್ ಇಡಲಾಗಿತ್ತು. ಇದು ಹಿಂದಿನ ಹನ್ನೆರಡು ಹದಿಮೂರು ವರ್ಷಗಳಿಂದ ಇದೆ. ಸಮಯ ಸಮಯಕ್ಕೆ ಅದಕ್ಕೆ ಉತ್ತಮಪಡಿಸುತ್ತಿದ್ದೇವೆ. ಈ ಮೆಷಿನ್ ಅಹ್ಮದಿ ಇಂಜಿನಿಯರೇ ಸ್ವತ: ತಯಾರಿಸಿದ್ದಾರೆ. ಈ ಮೆಷಿನಿನ ವಿಶೇಷತೆ ಏನೆಂದರೆ ಸ್ವಚ್ಛತೆಗಾಗಿ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE : 1800–103–2131**

**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**

**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.